ಶ್ರೀ ವಿನ್ಸುಕುಮಾರ ಸೊರಕೆ.—ಚುನಾವಣೆ ನಡೆಸುವುದಕ್ಕೆ ನಮಗೆ ಶಕ್ತಿ ಇದೆ. ಧೈರ್ಯ ಇದೆ. ಹೆದರಿಕೆ ಇಲ್ಲ...

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನೇನು ಅನ್ ಪಾರ್ಲಿಮೆಂಟರಿ ಪದ ಮಾತನಾಡಲಿಲ್ಲ. ನಿಮಗೆ ಶಕ್ತಿ ಇದ್ದರೆ ಚುನಾವಣೆ ಮಾಡಿ ಇಲ್ಲದಿದ್ದರೆ ಬೇಡ ಎಂದು ಹೇಳಿದೆ, ಇಡೀ ನಮ್ಮ ಕರ್ನಾಟಕ ರಾಜ್ಯದಲ್ಲಿ ಸಹಕಾರ ಸಂಘಗಳ ಚುನಾವಣೆಗಳನ್ನು ಮುಂದಕ್ಕೆ ಹಾಕತಕ್ಕಂಥದ್ದರಲ್ಲಿ ಅರ್ಥವಿಲ್ಲ. ನೀವು ಯಾವಾಗ ಚುನಾವಣೆ ಮಾಡುತ್ತೀರಿ ಎನ್ನುವುದನ್ನು ಸ್ಪಷ್ಟವಾಗಿ ಹೇಳಿ. ಇಲ್ಲಾ ಈಗ ಮಳೆಗಾಲ ಇದೆ ರೈತರಿಗೆ ತೊಂದರೆಯಾಗುತ್ತದೆ ಆದಕ್ಕೆ ಮುಂದಕ್ಕೆ ಹಾಕುತ್ತೇವೆ, ಮುಂದೆ ಇಂತಹ ದಿನ ಚುನಾವಣೆ ಮಾಡುತ್ತೇವೆಂದು ಹೇಳಿಕೆ ಕೊಡಿ.

(ಗೊಂದಲ)

ಶ್ರೀ ಎಚ್. ಆರ್. ರಾಜು.—ಮಾನ್ಯ ಹಿರಿಯ ಸದಸ್ಯರ ಸಲಹೆ ಒಳ್ಳೆಯದು ಇದೆ. ಆದಷ್ಟು ಬೇಗ ಈ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಇನ್ನು ಒಂದೆರಡು ದಿವಸಗಳಲ್ಲಿ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ನಮ್ಮ ಲೆಜಿಸ್ಲೇಟರ್ಸ್ ಪಾರ್ಟಿ ಮೀಟಿಂಗ್‌ನಲ್ಲಿ ಕನ್ಸಲ್ಟ್ ಮಾಡಿ ಹೇಳಬೇಕಾಗುತ್ತದೆ. ಕನ್ಸಲ್ಟ್ ಮಾಡಿಯೇ ಹೇಳಿ, ಪರವಾಗಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಹಕಾರಿ ಸಚಿವರು ಆದಷ್ಟು ಬೇಗ ಏನಾದರೊಂದು ತೀರ್ಮಾನ ತೆಗೆದುಕೊಳ್ಳಬೇಕು. ಸರ್ಕಾರದ ಆಜ್ಞೆ ಪ್ರಕಾರ ಜೂನ್ ೩೦ನೇ ತಾರೀಖಿನೊಳಗೆ ಎಲ್ಲ ಪ್ರಾಥಮಿಕ ಸಹಕಾರ ಸಂಘಗಳ ಚುನಾವಣೆ ಆಗಬೇಕು. ಜನರಲ್ ಬಾಡಿ ಮೀಟಿಂಗ್ ಕರೆಯಬೇಕಾದರೆ ೧೫ ದಿವಸಗಳ ಮೊದಲು ನೋಟೀಸ್ ಕೊಡಬೇಕು. ನೀವು ಒಂದೆರಡು ದಿನಗಳ ಒಳಗಾಗಿ ಒಂದು ನಿರ್ಧಾರ ತೆಗೆದುಕೊಂಡರೆ ಅವರಿಗೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ತೊಂದರೆಯಾಗುತ್ತದೆ ಆದಕ್ಕೆ ಏನಾದರೂ ಒಂದು ನಿರ್ಧಾರ ಬೇಗ ತೆಗೆದುಕೊಳ್ಳಿ. Suppose they take a decision on 15th, they would have spent a lot of money. At least, they should take a decision before 14th.

MR. SPEAKAR.—I think the Government is aware of the pros and cons of it.

ಶ್ರೀ ಆರ್. ವಿ. ದೇಶಪಾಂಡೆ.—ನಮ್ಮ ಕಾಲದಲ್ಲಿಯೂ ಆ ಪ್ರಕಾರ ಆಗಿದೆ. ನಾವು ಸಹ ಚುನಾವಣೆಗಳನ್ನು ಮುಂದಕ್ಕೆ ಹಾಕಿದ್ದೇವೆ. ನಮ್ಮ ವಿರೋಧಪಕ್ಷದ ನಾಯಕರು ಸಹ ಹೇಳಿದ್ದಾರೆ. ಒಂದು ವೇಳೆ ಡಿಪಾಲ್ಟರ್ಸ್ ಇದ್ದರೆ ಎಲೆಕ್ಷನ್‌ಗೆ ಸರಿಯಾದ ಕ್ಯಾಂಡಿಡೇಟ್ಸ್ ಸಿಗುವುದಿಲ್ಲ. ಇವುಗಳನ್ನೆಲ್ಲಾ ವಿಚಾರ ಮಾಡಿ ಎಂದು ನಮ್ಮ ವಿರೋಧಪಕ್ಷದ ನಾಯಕರು ಹೇಳಿದ್ದಾರೆ. ದಯಮಾಡಿ ತಾವು ನಾಳೆ ಅಥವಾ ನಾಡಿದ್ದು ಒಂದು ನಿರ್ಧಾರ ತೆಗೆದುಕೊಂಡರೆ ಸಹಕಾರ ಸಂಘಗಳಿಗೆ ಹಾನಿಯಾಗುವುದಿಲ್ಲವೆಂದು ಹೇಳುತ್ತೇನೆ.

ಅಧ್ಯಕ್ಷರು.—ಬೇಡಿಕೆಗಳ ಮೇಲಿನ ಚರ್ಚೆ ಇವತ್ತು ಮುಕ್ತಾಯವಾಗಬೇಕು. ನಾಳೆ ಮಾನ್ಯ ಮಂತ್ರಿಗಳು ಈಗ ಉತ್ತರ ಕೊಡತಕ್ಕವರಿದ್ದಾರೆ. ಆದರೆ ಬಹಳ ಜನ ಸದಸ್ಯರು ತಮ್ಮ ಹೆಸರುಗಳನ್ನು ಕೊಟ್ಟು ನಾವು ಚರ್ಚೆಯಲ್ಲಿ ಭಾಗವಹಿಸಬೇಕೆಂದು ಹೇಳಿದ್ದಾರೆ. ಆದ್ದರಿಂದ ಮಿತಿಯಿಲ್ಲದೆ ನಾನು ಕಾಲದ ಮಿತಿಯನ್ನು ಪ್ರತಿ ಸದಸ್ಯರಿಗೂ ಹಾಕಬೇಕಾಗುತ್ತದೆ. ಇಲ್ಲದಿದ್ದರೆ ಸದಸ್ಯರೆ ಮಿತಿ ಹಾಕಿಕೊಂಡರೆ ಒಳ್ಳೆಯದು. ಈಗ ಹರ್ಷ ಕುಮಾರ ಗೌಡ್ರೆ, ತಾವು ಮಾತನಾಡಿ.

† ಶ್ರೀ ಹರ್ಷಕುಮಾರ್ ಗೌಡ (ಚಾಮರಾಜ).—ಸನ್ಮಾನ್ಯ ಸಭಾಧ್ಯಕ್ಷರೇ, ಇವೊತ್ತು ಈ ಸದನದ ಮುಂದೆ ರಾಜ್ಯದ ನಗರಾಭಿವೃದ್ಧಿ ಮಂತ್ರಿಗಳು ಯಾವ ಇಲಾಖಾ ಬೇಡಿಕೆಗಳನ್ನು ಮಂಡಿಸಿದ್ದಾರೋ ಅದನ್ನು ನಾನು ಅನುಮೋದಿಸುತ್ತಾ ಈ ಒಂದು ನಗರದ ನಾಗರೀಕರ ಸಮಸ್ಯೆಗಳ ಬಗ್ಗೆ ನನ್ನ ರಚನಾತ್ಮಕವಾದ ಸಲಹೆಗಳನ್ನು ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ವ್ಯಕ್ತಪಡಿಸುವುದಕ್ಕೆ ಅಪೇಕ್ಷೆಪಡುತ್ತೇನೆ. ಪ್ರಥಮವಾಗಿ ಯಾವ ನಗರದ ಬಹುತೇಕ ಮಹಾ ಜನತೆಯು ಅತ್ಯಾವಶ್ಯಕ ಅವಶ್ಯಕತೆಗಳು ಏನಿವೆ, ಅವುಗಳಲ್ಲಿ ಪ್ರಮುಖವಾದ ನೀರು, ವಸತಿ ಮುಂತಾದ ಸಮಸ್ಯೆಗಳ ಬಗ್ಗೆ ಹಲವಾರು ರೀತಿಯಲ್ಲಿ ಅಂದರೆ ವೈಜ್ಞಾನಿಕರೀತಿಯಲಿ ಯೋಜನಾಬದ್ಧವಾದ ರೀತಿಯಲ್ಲಿವ್ಯವಸ್ಥಿತವಾದ ರೀತಿಯಲ್ಲಿ ನಗರದ ಜನತೆಯು ಈ ಅವಶ್ಯಕತೆಗಳನ್ನು ಪೂರೈಸುವಂಥ ಪ್ರಾಮಾಣಿಕ ಪ್ರಯತ್ನ ಮಾಡುವುದರತ್ತ ಈ ಇಲಾಖೆ ದಿಟ್ಟ ಕ್ರಮ ಕೈಗೊಳ್ಳಬೇಕೆಂದು ಈ ಸಭೆಯ ಮೂಲಕ

ಒತ್ತಾಯಿಸುತ್ತೇನೆ. ಈ ಸಂದರ್ಭದಲ್ಲಿ ಹಿಂದೆ ಇಡೀ ರಾಜ್ಯಾದ್ಯಂತ ಅದರಲ್ಲೂ ಕೂಡ ಪ್ರಮುಖವಾಗಿ ಹರಿಜನ ಗಿರಿಜನ ಬಾಂಧವರಿಗೆ, ದುರ್ಬಲವರ್ಗದ ಮಹಾ ಜನತೆಗೆ ಯಾವ ನಿವೇಶನವನ್ನು ಕೊಡುವಂಥ ವ್ಯವಸ್ಥೆ ಬಗ್ಗೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುತ್ತಾ ಇತ್ತೋ ಆ ಜವಾಬ್ದಾರಿಯನ್ನು ಇವೊತ್ತು ಮಂಡಲ ಪಂಚಾಯಿತಿಗಳಿಗೆ ಸರ್ಕಾರ ವಹಿಸಿದೆ. ಮಾನ್ಯ ನಗರಾಭಿವೃದ್ಧಿ ಮಂತ್ರಿಗಳ ಮತ್ತು ಸಂಬಂಧಪಟ್ಟ ಮಂತ್ರಿಗಳಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಮಂಡಲದ ಒಂದು ನೆಲೆಗಟ್ಟು ಏನಿದೆ, ಅದರಲ್ಲಿ ಆ ಗ್ರಾಮದ ಅಭಿವೃದ್ಧಿ ಮಾತ್ರವಾಗುತ್ತದೆ. ಬಡ ಜನತೆಗೆ ನಿವೇಶನ ಕೊಡುವಂತಹ ವ್ಯವಸ್ಥೆ ಅವುಗಳನ್ನು ಹಂಚುವಂತಹ ವ್ಯವಸ್ಥೆಯಲ್ಲಾಗಲೀ ಮಂಡಲ ಪಂಚಾಯಿತಿಗೆ ಶಕ್ತಿ ಇಲ್ಲದೇ ಇರುವುದರಿಂದ ಸರ್ಕಾರ ಯಾವ ಜವಾಬ್ದಾರಿಯನ್ನು ಮಂಡಲಗಳಿಗೆ ವಹಿಸಿದೆಯೋ ಅದನ್ನು ರಾಜ್ಯ ಸರ್ಕಾರ ತೆಗೆದುಕೊಳ್ಳುವುದು ಒಳ್ಳೆಯದು. ಇಡೀ ರಾಜ್ಯಾದ್ಯಂತ ಒಂದು ವ್ಯವಸ್ಥಿತವಾದ ರೀತಿಯಲ್ಲಿ ಹಿಂದೆ ಯಾವ ರೀತಿ ಇತ್ತೋ, ದುರ್ಬಲ ವರ್ಗದ, ಅದರಲ್ಲೂ ಸಮಾಜದಲ್ಲಿ ಶೋಷಣೆಗೆ ಒಳಗಾಗಿರುವ ಹರಿಜನ ಗಿರಿಜನರ ಬಾಂಧವರು ಯಾರಿದ್ದಾರೋ ಅವರಿಗೆ ಅನುಕೂಲ ಮಾಡುವಂಥ ಒಂದು ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಒತ್ತಾಯಿಸುತ್ತೇನೆ, ಜೊತೆಗೆ ಇಡೀ ರಾಜ್ಯಾದ್ಯಂತ ಕಳೆದ ಅಧಿವೇಶನದ ಮುಂಗಡ ಪತ್ರದಲ್ಲಿ ನಮ್ಮ ಅರ್ಥ ಮಂತ್ರಿಗಳು ನಗರದ ಪ್ರಮುಖ ಸಮಸ್ಯೆಯಾದ ನೀರಿನ ಸಮಸ್ಯೆ ನಿವಾರಿಸುವುದಕ್ಕೆ ಸುಮಾರು ೧೩೦ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಈ ಮೂಲಕ ನಗರದ ಜನತೆಯ ನೀರಿನ ಬವಣೆಯನ್ನು ನೀಗಿಸುವಂತಹ ವ್ಯವಸ್ಥೆ ಮಾಡುತ್ತಿದ್ದೇವೆಂದು ಹೇಳಿ ಅವತ್ತು ಆಶ್ವಾಸನೆ ಕೊಟ್ಟಿದ್ದಾರೆ. ಈ ಇಲಾಖೆ ಬೇಡಿಕೆ ಸಂದರ್ಭದಲ್ಲಿ ನಮ್ಮ ಹಿರಿಯ ಮಂತ್ರಿಗಳಾದ ಮತ್ತು ನಮ್ಮ ಜಿಲ್ಲೆಯವರಾದ ಶ್ರೀ ನರಸಿಂಹಮೂರ್ತಿಯವರು ಬಹಳ ದಕ್ಷ ಹಾಗೂ ಪ್ರಾಮಾಣಿಕರಾಗಿದ್ದಾರೆ. ಅವರು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆಂದು ಹೇಳುತ್ತೇನೆ. ಅದೇ ಮೇಲೆ ಮೈಸೂರು ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವುದಕ್ಕೆ ಆರೂವರೆ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರೆ. ನಾನು ತಮ್ಮ ಮೂಲಕ ಒತ್ತಾಯಿಸುವುದೇನೆಂದರೆ, ಈ ಒಂದು ಯೋಜನೆಯನ್ನು ಆದ್ಯತೆ ಆಧಾರದ ಮೇಲೆ ಇವತ್ತು ಹಣವನ್ನು ಖರ್ಚು ಮಾಡಬೇಕು. ಮೈಸೂರಿನಲ್ಲಿರುವ ಕುಡಿಯುವ ನೀರಿನ ಬವಣೆಯನ್ನು ನೀಗಿಸಬೇಕು ಹಾಗೂ ೩ನೇ ಹಂತದ ಕೆಲಸವನ್ನು ಆದ್ಯತೆ ಮೇಲೆ ಪೂರೈಸಬೇಕೆಂದು ತಮ್ಮ ಮುಖಾಂತರ ಒತ್ತಾಯಿಸುತ್ತೇನೆ.

೫-೧೫ ಪಿ. ಎಂ.

ಏಕೆಂದರೆ ಕಾವೇರಿ ನೀರು ತಮಿಳುನಾಡಿಗೆ ನಿರಂತರವಾಗಿ ಹರಿಯುವುದನ್ನು ನೋಡಿದ್ದೇವೆಯೇ ವಿನಾ ಮೈಸೂರು ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅದರಲ್ಲೂ ಮುಖ್ಯವಾಗಿ ಕಾವೇರಿ ದಡದಲ್ಲಿರುವ ಶ್ರೀ ರಂಗಪಟ್ಟಣ ಕೂಡ ಇವತ್ತು ನೀರಿನ ಬರ ಎದುರಿಸುವ ಪರಿಸ್ಥಿತಿಯನ್ನು ನೋಡುತ್ತಿರಬೇಕಾದರೆ, ನಾನಾದರೂ ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ಆದ್ಯತೆ ಆಧಾರದ ಮೇಲೆ ಕಾವೇರಿ ನೀರನ್ನು ಉಪಯೋಗಿಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕು. ಆ ದಿಶೆಯಲ್ಲಿ ಆರ್ಥಿಕ ಯೋಜನೆಗಳನ್ನು ಏನು ರೂಪಿಸಿಕೊಂಡಿದ್ದೀರಿ ಅವನ್ನು ಆದಷ್ಟು ಕಡಿಮೆ ಸಮಯದಲ್ಲಿ ಪೂರೈಸುವಂತಹ ಕೆಲಸವನ್ನು ಮಾಡಬೇಕೆಂದು ಮನವಿ ಮಾಡುತ್ತೇನೆ. ಮೈಸೂರಿನಲ್ಲಿ ಈಗ ೮ ಲಕ್ಷ ಜನರ ವಾಸದ ದೃಷ್ಟಿಯಿಂದ ಹೇಳುವುದಾದರೆ ಈಗಿನ ೬.೫ ಕೋಟಿ ನೀರಿನ ಯೋಜನೆ ಸಾಲುವುದಿಲ್ಲ. ೨ ಸಾವಿರದ ಇಸವಿವರೆಗೆ ನೀರಿನ ಬರ ನೀಗಿಸಬೇಕಾದರೆ ೨೦ ಕೋಟಿ ರೂಪಾಯಿಗಳ ೪ನೇ ಹಂತದ ಯೋಜನೆಯನ್ನು ಕೂಡ ಮಾನ್ಯ ಮಂತ್ರಿಗಳು ಕೂಡಲೇ ಆರಂಭಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ವಸತಿ ಸಮಸ್ಯೆ. ಇಡೀ ರಾಜ್ಯದ ಜನರ ಸಮಸ್ಯೆ ಇದು. ಈಗ ಇದರ ಜವಾಬ್ದಾರಿ ಮಾನ್ಯ ಮಂತ್ರಿಗಳ ಮೇಲಿದೆ ಹಾಗೂ ಸಂಬಂಧಪಟ್ಟ ಇಲಾಖಾ ಅಧಿಕಾರಿ ಬಾಂಧವರ ಮೇಲೆ ಇದೆ. ಹಿಂದಿನ ಸರ್ಕಾರದ ೭ ವರ್ಷಗಳ ಅವಧಿಯ ಕೆಲಸ ನೋಡಿದರೆ ಕರ್ನಾಟಕದ ಮಕ್ಕಳಿಗೆ ವಸತಿ ಸಿಗಲಿಲ್ಲ. ವಿದೇಶಗಳಲ್ಲಿರುವ ಭಾರತೀಯರಿಗೆ ಬೆಂಗಳೂರಿನಲ್ಲಿ ವಸತಿ ಸಿಕ್ಕಿತು. ಇದು ಹಿಂದಿನ ಸರ್ಕಾರದ ಆಡಳಿತಾತ್ಮಕ ನಿರ್ಧಾರವಿರಬಹುದು. ಹೀಗಾಗಿ ಕರ್ನಾಟಕದ ಜನ ಹಲವಾರು ವರ್ಷಗಳಿಂದ ನಿವೇಶನಗಳನ್ನು ಪಡೆಯದೆ ವಂಚಿತರಾಗಿದ್ದಾರೆ. ಇದರ ಜೊತೆಗೆ ಹಲವಾರು ಏಜೆನ್ಸಿಗಳು ರಾಜ್ಯದ ಜನತೆಗೆ ನಿವೇಶನಗಳನ್ನು ಹಂಚಿಕೆ ಮಾಡದೆ ಬಹಳ ಬೇಜವಾಬ್ದಾರಿಯಿಂದ ವರ್ತಿಸಿರುವ ವ್ಯವಸ್ಥೆಯನ್ನು ನಾವು ನೋಡಿದ್ದೇವೆ. ಪ್ರಥಮವಾಗಿ ಬೆಂಗಳೂರಿನ ಬಿಡಿಎ ಮತ್ತು ಮೈಸೂರಿನ ಎಂಯುಡಿಎ ವರು

ಜನರಿಗೆ ಯಾವ ವಸತಿ ಕೊಡಬೇಕಾಗಿತ್ತು ಅದನ್ನು ಕೊಡದೆ ವಿದೇಶಿ ಭಾರತೀಯರಿಗೆ ಕೊಟ್ಟರು. ಆದರೆ ಖಾಸಗಿ ಗೃಹನಿರ್ಮಾಣ ಮಂಡಲಿಗಳು ವಸತಿ ಕೊಡುವ ವ್ಯವಸ್ಥೆಯನ್ನು ಮಾಡಿದವು. ಇನ್ನು ಮುಂದೆ ಈ ಪ್ರಾಧಿಕಾರಗಳು ಏಜೆಂಟರಂತೆ ಮತ್ತು ದಳ್ಳಾಳಿಗಳ ರೀತಿ ಕೆಲಸ ಮಾಡುವುದಕ್ಕೆ ಈಗಿನ ಸರ್ಕಾರ ಅವಕಾಶ ಕೊಡಬಾರದೆಂದು ತಮ್ಮ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ. ಇದರ ಜೊತೆಗೆ ಜನರು ಏನು ತಮ್ಮಲ್ಲಿ ವಿಶ್ವಾಸವಿಟ್ಟಿದ್ದಾರೆ, ಅದಕ್ಕೆ ಭಂಗ ತಂದುಕೊಳ್ಳಬಾರದೆಂದು ಹೇಳುತ್ತೇನೆ. ಇನ್ನು ಕರ್ನಾಟಕ ರಾಜ್ಯದಲ್ಲಿರುವ ನಗರಪಾಲಿಕೆಗಳ ಮತ್ತು ಪುರಸಭೆಗಳ ಆಡಳಿತಕ್ಕೆ ಒಳಪಟ್ಟಿರುವ ರಸ್ತೆಗಳು, ಒಳಚರಂಡಿ ವ್ಯವಸ್ಥೆ ಯೋಜನೆಗಳು ಚೆನ್ನಾಗಿಲ್ಲ. ನಮ್ಮ ಮೈಸೂರು ನಗರಪಾಲಿಕೆ ಈ ನಾಗರೀಕ ಸೌಲಭ್ಯಗಳನ್ನು ಒದಗಿಸುವುದರಲ್ಲಿ ಸಂಪೂರ್ಣ ವಿಫಲವಾಗಿದೆ. ಮೈಸೂರು ನಗರದಲ್ಲಿ ಎಲ್ಲಾ ಹಳೇಕಾಲದ ರಸ್ತೆಗಳು ಇವೆ. ಒಂದು ಸಲ ಒಂದು ರಸ್ತೆ ರಿಪೇರಿಯಾದರೆ ಕೇವಲ ಒಂದೇ ತಿಂಗಳಲ್ಲಿ ಅದು ಹಾಳಾಗುತ್ತದೆ. ಅಂಥ ಕಳಪೆ ಮಟ್ಟದ ರಸ್ತೆಗಳನ್ನು ನಿರ್ಮಾಣ ಮಾಡಲು ತಾವು ಅವಕಾಶ ಕೊಡಬಾರದೆಂದು

ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಏತಕ್ಕೆಂದರೆ ದೆಹಲಿಯಲ್ಲಿ ಒಂದು ಮಾದರಿಯಲ್ಲಿ ಮಾಡಿದ್ದಾರೆ. ಗುತ್ತಿಗೆದಾರನ ಮತ್ತು ಇಂಜಿನಿಯರುಗಳ ಹೆಸರುಗಳನ್ನು ರಸ್ತೆಯ ಬದಿಯಲ್ಲಿ ಹಾಕುತ್ತಾರೆ. ಆಗ ಅವರಿಗೆ ಸಂಪೂರ್ಣವಾಗಿ ಜವಾಬ್ದಾರಿ ಇರುತ್ತದೆ ಆ ರಸ್ತೆಯನ್ನು ಪ್ರಾಮಾಣಿಕವಾಗಿ ನಿರ್ಮಾಣ ಮಾಡಬೇಕು. ಒಳ್ಳೆಯ ಗುಣಮಟ್ಟದ ರಸ್ತೆಗಳನ್ನು ನಿರ್ಮಾಣ ಮಾಡಬೇಕು ಎಂದು ಅವರಿಗೆ ಜವಾಬ್ದಾರಿ ಇರುತ್ತದೆ. ಈ ಮಾದರಿಯಲ್ಲಿಯೇ ನಮ್ಮಲ್ಲೂ ಮಾಡಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಒಳ್ಳೆಯ ರಸ್ತೆಗಳನ್ನು ಮಾಡಬೇಕೆಂದು ಹೇಳುತ್ತೇನೆ. ಕೊನೆಯದಾಗಿ ನಾನು ಮೈಸೂರು ನಗರದ ಬಗ್ಗೆ ಹೇಳುತ್ತಾ, ಈ ನಗರದಲ್ಲಿ ಇವತ್ತು ೭೦ ವರ್ಷಕ್ಕೂ ಹಳೆಯದಾದ ಒಳಚರಂಡಿ ವ್ಯವಸ್ಥೆ ಇದೆ. ಅಂದಿನ ರಾಜರ ಕಾಲದಲ್ಲಿ ಆದಂಥ ಒಳಚರಂಡಿ ವ್ಯವಸ್ಥೆ ಇದೆ. ಅಂದು ಒಂದೂವರೆ ಎರಡು ಲಕ್ಷ ಜನಸಂಖ್ಯೆಗೆ ಇದ್ದ ಈ ಒಂದು ವ್ಯವಸ್ಥೆಯ ಅನುಕೂಲ ಇವತ್ತು ಎಂಟು ಲಕ್ಷ ಜನಸಂಖ್ಯೆಗೆ ಆಗುತ್ತಿದೆ. ಮೈಸೂರು ನಗರವು ಅತ್ಯಂತ ಹಾಳು ಕೊಂಪೆ ಆಗುವಂಥ ಒಂದು ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಈ ಮೈಸೂರಿನ ಜನತೆ ಅಂಥ ಪರಿಸ್ಥಿತಿಯನ್ನು ಕಾಣುವಂಥಾಗಿದೆ. ನಮ್ಮ ಸಂಬಂಧಪಟ್ಟ ಮಂತ್ರಿಗಳು ಮಾನ್ಯ ನರಸಿಂಹಮೂರ್ತಿಯವರು ಅವರು ಅತ್ಯಂತ ಶೀಘ್ರವಾಗಿ ಒಳಚರಂಡಿ ವ್ಯವಸ್ಥೆಯನ್ನು ಸಂಪೂರ್ಣವಾಗಿ ನವೀಕರಿಸುವಂಥ ಒಂದು ವ್ಯವಸ್ಥೆಯನ್ನು ಮತ್ತು ಹೊಸ ಯೋಜನೆಯನ್ನು ರೂಪಿಸಬೇಕು ಎಂದು ಹೇಳಿ ತಮ್ಮ ಮುಖಾಂತರ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕಟ್ಟಕಡೆಯದಾಗಿ ಇವತ್ತು ಏನು ಒಂದು ಪರಿಸರದ ಆಂದೋಲನದ ದೃಷ್ಟಿಯಿಂದ ಪರಿಸರದ ಸಮತೋಲನದ ದೃಷ್ಟಿಯಿಂದ ಇವತ್ತು ಎಲ್ಲಾ ನಗರಗಳ ಹೊರವಲಯಗಳಲ್ಲೂ ಕೂಡ ಕೈಗಾರಿಕಾ ಪ್ರದೇಶಗಳಿಂದ ಆವೃತವಾಗಿರುವುದು ಮತ್ತು ಹೊಸ ಬಡಾವಣೆಗಳ ಪಕ್ಕದಲ್ಲಿಯೇ ಕೈಗಾರಿಕೆಗಳು ಬೆಳೆಯುತ್ತಿರುವುದು ನಗರಗಳ ಒಂದು ನೈರ್ಮಲ್ಯದ ದೃಷ್ಟಿಯಿಂದ ನಗರದ ಜನತೆಯ ಆರೋಗ್ಯದ ದೃಷ್ಟಿಯಿಂದ ಒಳ್ಳೆಯದಲ್ಲ, ಈ ಒಂದು ಅನಾಗರೀಕ ವ್ಯವಸ್ಥೆಯನ್ನು ತಪ್ಪಿಸಬೇಕಾದರೆ ನಗರಗಳಿಂದ ಕನಿಷ್ಟ ೧೫ ರಿಂದ ೨೫ ಕಿಲೋಮೀಟರ್ ದೂರದವರೆಗೆ ಹೋಗಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಅವಕಾಶ ಮಾಡಿಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಕಟ್ಟಕಡೆಯದಾಗಿ ಕೆ.ಇ.ಬಿ. ಬಗ್ಗೆ ಒಂದು ವಿಷಯವನ್ನು ಹೇಳಬೇಕಾಗಿದೆ ಈ ಒಂದು ಸರ್ಕಾರ ಕೆ.ಇ.ಬಿ.ಗೆ. ಚುರುಕು ಮಾಡುವುದಕ್ಕೆ ಷಾಕ್—ಟ್ರೀಟ್‌ಮೆಂಟ್ ಕೊಡಬೇಕು. ಇಡೀ ರಾಜ್ಯದ ಜನತೆಗೆ ಒಂದು ಶಾಪವಾಗಿರುವಂಥ ಒಂದು ಕೆಟ್ಟ ಇಲಾಖೆ ಯಾವುದಾದರೂ ಇದೆ ಎಂದರೆ ಅದು ಕೆ.ಇ.ಬಿ. ಅದರ ಮೇಲೆ ಉಗ್ರವಾದ ಕ್ರಮ ಕೈಗೊಳ್ಳಬೇಕು ಜೊತೆಗೆ ಕೆ.ಇ.ಬಿ. ಮತ್ತು ನಗರಪಾಲಿಕೆಗೆ ಹಾಗೂ ಜಲಮಂಡಲಿಗಳು ಏನಿವೆ, ಇವುಗಳ ನಡುವೆ ಹೊಂದಾಣಿಕೆಯ ಅಭಾವ ಇದೆ. ಇವೆಲ್ಲದರ ಬಗ್ಗೆ ಅಥಾರಿಟಿ ಇಂತಹಂಥ ಒಂದು ಸಿಂಗಲ್ ವಿಂಡೋ ಏಜೆನ್ಸಿ ವ್ಯವಸ್ಥೆ ಆಗಬೇಕು ಎಂದು ಹೇಳಿ ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಒತ್ತಾಯಿಸುತ್ತಾ ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ನನ್ನ ಅನಂತ ವಂದನೆಗಳನ್ನು ಸಲ್ಲಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ. ಜೈಹಿಂದ್, ಜೈ ಕರ್ನಾಟಕ.

(ಶ್ರೀ ಎಸ್.ಹೆಚ್. ಕೌಜಲಗಿ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

† ಶ್ರೀ ಪಿ. ಸಿ. ಸಿದ್ದನಗೌಡರ್ (ಕಲಘಟಗಿ).— ಮಾನ್ಯ ಅಧ್ಯಕ್ಷರೇ, ಮಾನ್ಯ ನಗರಾಭಿವೃದ್ಧಿ ಸಚಿವರು ಏನು ಬೇಡಿಕೆಯನ್ನು ಮಂಡಿಸಿದ್ದಾರೆ, ಆ ಒಂದು ಬೇಡಿಕೆಯ ಮೇಲೆ ಕೆಲವೊಂದು ಸೂಚನೆಯನ್ನು ನಾನು ಹೇಳಬಯಸುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಹುಬ್ಬಳ್ಳಿ—ಧಾರವಾಡ ಮಹಾನಗರಸಭೆ ಬೆಂಗಳೂರನ್ನು ಬಿಟ್ಟರೆ ಎರಡನೇಯದು ಎಂದು ಅನೇಕ ಸಲ ಅವರ ಹೇಳಿಕೆಯಲ್ಲಿಯೇ ಹೇಳಿದ್ದಾರೆ.

ಇಲ್ಲಿಯವರೆಗೂ ಯಾವುದಾದರೂ ಒಂದು ಡೆವಲಪ್‌ಮೆಂಟ್ ಹುಬ್ಬಳ್ಳಿಗೆ ಆಗಿಲ್ಲ. ಬೆಂಗಳೂರು ಅಥವಾ ಮೈಸೂರನ್ನು ಹೋಲಿಕೆ ಮಾಡಿದಾಗ ಹುಬ್ಬಳ್ಳಿ—ಧಾರವಾಡ ಮಹಾನಗರ ಸಭೆಯಿಂದ ಯಾವ ಅಭಿವೃದ್ಧಿಯೂ ಆಗಿಲ್ಲ. ಈಗಾಗಲೇ ಕುಡಿಯುವ ನೀರಿನ ಸಮಸ್ಯೆ ಬಹಳ ಇದೆ. ಉದಾಹರಣೆಗೆ ಹೇಳಬೇಕೆಂದರೆ ೮೫-೮೬ರಲ್ಲಿ ಹಿಂದಿನ ಸರ್ಕಾರದವರು ಈ ಕಾರ್ಪೊರೇಷನ್ ಮೂಲಕ ಬೋರನ್ನು ಹಾಕಿದ್ದರು. ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಕುಡಿಯುವ ನೀರಿನ ಸಮಸ್ಯೆ ಇದ್ದ ಸಂದರ್ಭದಲ್ಲಿ ಸಾಕಷ್ಟು ಬೋರ್‌ಗಳನ್ನು ಹಾಕಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿದ್ದರು. ಈಗಲಾದರೂ ಕುಡಿಯುವ ನೀರಿನ ಸಮಸ್ಯೆಯನ್ನು ಶಾಶ್ವತವಾಗಿ ಬಗೆಹರಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ನಮಗೆ ಎರಡು ರೀತಿಯಿಂದ ವಾಟರ್ ಸೋರ್ಸಸ್ ಇದೆ. ಹುಣ್‌ಕಲ್ ಟ್ಯಾಂಕ್ ಮತ್ತು ನೀರ್‌ಸಾಗರ ಕರೆ ಎಂದು ಇದೆ. ಈ ಎರಡನ್ನು ಮಾತ್ರ ಸರಿಯಾಗಿ ಡೀಸಿಲ್ಟ್ ಮಾಡಬೇಕು ನೀರಿನ ಸ್ಕೇರ್‌ಸಿಟಿ ಇದ್ದಾಗ ಕಾರ್ಪೊರೇಷನ್ ಮೂಲಕ ಡೀಸಿಲ್ಟ್ ಮಾಡಲಿಕ್ಕೆ ಆಗಲಿಲ್ಲ. ಆದರೂ ಕೂಡಾ ರೆಪಿನ್ನೂ ಇಲಾಖೆಯಿಂದ ಮಾಡಿಸಿದ್ದೇವೆ. ಏತಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ದಯವಿಟ್ಟು ತಾವು ಒಂದು ಸಾರಿ ಅಲ್ಲಿಗೆ ಭೇಟಿ ಕೊಡಬೇಕು. ಹುಣ್‌ಕಲ್ ಕೆರೆ ಜಮೀನಿನ ಕೆಲವು ಎಕರೆ ಜಮೀನನ್ನು ಬೇರೆಯವರಿಗೆ ಕೊಟ್ಟಿದ್ದಾರೆ ಎಂದು ತಿಳಿದು ಬಂದಿದೆ. ಹಾಗೆ ಏನಾದರೂ ಆಗಿದ್ದರೆ ಅದನ್ನು ರದ್ದುಪಡಿಸಿ ಈ ನೀರನ್ನು ಕೊಡತಕ್ಕಂಥ ಜಾಗ ಏನು ಇದೆ. ಅದನ್ನು ಕಾರ್ಪೊರೇಷನ್ ವಶಕ್ಕೆ ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಮಹದಾಯಿ ಯೋಜನೆಯ ಬಗ್ಗೆ ಇಲ್ಲಿಯವರೆಗೂ ನಾವು ಅನೇಕ ಸಲ ಮಾತನಾಡಿದ್ದೇವೆ. ಅದು ಇನ್ನೂ ಕಾರ್ಯರೂಪ ಆಗಿಲ್ಲ. ಅದನ್ನು ತೀವ್ರ ರೀತಿಯಿಂದ ಕಾರ್ಯರೂಪಕ್ಕೆ ತಂದು ಹುಬ್ಬಳ್ಳಿ—ಧಾರವಾಡ ಮಹಾನಗರ ಸಭೆಗೆ ಕುಡಿಯುವ ನೀರನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ಹಿಂದೆ ಒಬ್ಬರು ಅಶೋಕ್ ಮುಗಳಿ ಎಂದು ಒಬ್ಬರು ಕಮಿಷನರ್ ಇದ್ದರು. ಬಹಳ ಒಳ್ಳೆಯ ಕೆಲಸವನ್ನು ಅವರು ಮಾಡಿದ್ದಾರೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಈ ರಾಜಕೀಯದೊಳಗೆ ಆ ಅಧಿಕಾರಿಯನ್ನು ವರ್ಗಾವಣೆ ಮಾಡಿದರು.

ಬೆಳಿಗ್ಗೆ ನಾಲ್ಕು ಗಂಟೆಗೆ ಎದ್ದು ಅವರು ಎಲ್ಲಾ ವಾರ್ಡ್‌ಗಳಿಗೆ ಅಡ್ಡಾಡುತ್ತಿದ್ದರು. ಅಂತಹ ಒಳ್ಳೆಯ ಅಧಿಕಾರಿ. ಅಂಥವರನ್ನು ಹಾಕಿ. ಈಗ ಇದ್ದವರೂ ಒಳ್ಳೆಯವರು, ಆದರೆ ಅವರಿಗೆ ಆಡಳಿತ ಮಾಡುವುದಕ್ಕೆ ಆಗುವುದಿಲ್ಲ. ಹುಬ್ಬಳ್ಳಿ ಧಾರವಾಡ ಮಹಾ ನಗರಪಾಲಿಕೆಗೆ ಸ್ವಲ್ಪ ಹೆಚ್ಚು ಕೆಲಸ ಮಾಡತಕ್ಕ ಅಧಿಕಾರಿ ಬೇಕಾಗುತ್ತಾರೆ. ಈ ಒಂದು ತೀರ್ಮಾನ ತಮಗೆ ಬಿಟ್ಟಿದ್ದು. ಇನ್ನು ರಸ್ತೆ ಕೆಲಸ ಮಾಡುತ್ತಿದ್ದಾರೆ. ನಾನು ಕಮೀಷನರ್‌ಗೆ ಹೇಳಿದೆ. ನೋಡಿ ಗ್ರೈಡ್ ಮಾರ್ಕೆಟ್‌ನ ಹತ್ತಿರ ರಸ್ತೆ ಮಾಡುತ್ತಿದ್ದಾರೆ, ಅಲ್ಲಿ ಸೈಡ್ ಗಟಾರಗಳು ಇಲ್ಲ ಸೈಡ್ ಗಟಾರವನ್ನು ಮಾಡಿಸಿ ಎಂದು ಹೇಳಿದೆ ನನ್ನ ಉದ್ದೇಶ ಇಷ್ಟೇ. ಕಾರ್ಪೊರೇಷನ್ ದುಡ್ಡು ಹಾಳಾಗುತ್ತದೆ. ಅದಕ್ಕೆ ನೀವು ಗ್ರೈಡ್ ಮಾಡಬೇಕು. ಅಲ್ಲದೆ ಹುಬ್ಬಳ್ಳಿ ಧಾರವಾಡದಲ್ಲಿ ಹಂದಿಗಳ ಕಾಟ ಜಾಸ್ತಿ ಆಗಿದೆ. ಆದ್ದರಿಂದ ಹಂದಿ ನಿರ್ಮೂಲನಾ ಮಂಡಲಿ ಮಾಡುತ್ತಾರೆಯೋ ಎಂದು ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ. ಧೋಬಿ ಘಾಟ್ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಆ ಮಟ್ಟಕ್ಕೆ ನಾನು ಹೋಗುವುದಿಲ್ಲ. ಮಲಪ್ರಭಾ ಸೆಕೆಂಡ್ ಸ್ಟೇಜ್‌ಗೆ ಹಿಂದೆ ಮಾನ್ಯ ಬೊಮ್ಮಾಯಿಯವರು ಮುಖ್ಯಮಂತ್ರಿಯಾಗಿದ್ದಾಗ ಒಂದು ಕೋಟಿ ರೂಪಾಯಿ ಮಂಜೂರಾತಿ ಮಾಡಿ ಅದನ್ನು ಕಾರ್ಪೊರೇಷನ್‌ನಲ್ಲಿ ಡಿಪಾಸಿಟ್ ಇಟ್ಟಿದ್ದಾರೆ. ಇದು ತಮಗೆ ಗೊತ್ತಿದೆ. ತಾವೇ ಅದಕ್ಕೆ ಅಡಿಗಲ್ಲು ಹಾಕಿದ್ದೀರಿ. ಹಿಂದೆ ಧರ್ಮಸಿಂಗ್‌ರವರು ಈ ಕೆಲಸ ಮಾಡಬೇಕು ಎಂದು ಯೋಚನೆ ಮಾಡಿದ್ದರು. ಬೇಗ ಸೆಕೆಂಡ್ ಸ್ಟೇಜ್ ಕಾರ್ಯ ಮುಗಿಯಲಿ ಎಂದು ಹೇಳುತ್ತೇನೆ. ಇದರ ನಂತರ ಕುಂದಗೋಳ್ ವಿಚಾರದಲ್ಲಿ ಹೇಳುವುದಾದರೆ ನಾವು ಮಾಡಿದ್ದೇವೆ, ನೀವು ಮಾಡಿದ್ದೀರಿ ಎಂಬ ಪ್ರಶ್ನೆ ಅಲ್ಲ. ಜನರಿಗೆ ಒಂದು ಕೊರತೆ ಏನು ಇದೆ, ಅದು ಬೇಗ ಆಗಬೇಕು ಎಂದು ಹೇಳುತ್ತೇನೆ. ಈಗ ಇವರು ಪೇಜ್ ೭೦ರಲ್ಲಿ ಮುನಿಸಿಪಾಲಿಟಿಗಳ ಆದಾಯ ೧೪ ಕೋಟಿ ೧೬ ಲಕ್ಷ ಹಾಗೂ ಖರ್ಚು ಕೂಡ ೧೪ ಕೋಟಿ ೧೭ ಲಕ್ಷ ಎಂದು ಹೇಳಿದ್ದಾರೆ. ಸರಿ ಮತ್ತು ಬೆಸ ಎಂದು ಹೇಳುತ್ತಾರೆಯಲ್ಲ ಹಾಗೆ ಇದು ಆಗಿದೆ ಮೈನಸ್ ಪ್ಲಸ್ ಮೈನಸ್ ಎಂದು ಹೇಳಿದಹಾಗೆ ಬ್ಯಾಲನ್ಸ್ ಶೀಟ್ ಇದೆ. ದಯವಿಟ್ಟು ಆದಾಯ ಎಷ್ಟು ಇದೆ, ಖರ್ಚು ಎಷ್ಟು ಇದೆ ಎಂದು ಮಾನ್ಯ ಸಚಿವರು ನೋಡಬೇಕು. ಇದರಲ್ಲಿ ಡೆವಲಪ್‌ಮೆಂಟ್ ಅಥಾರಿಟಿಯಲ್ಲಿ ಆದಾಯ ಜಾಸ್ತಿ ಇದೆ, ಆದರೆ ಇಲ್ಲಿ ಖರ್ಚು ಆಗಿದ್ದು ಬಹಳ ಕಡಿಮೆ ಇದೆ. ಇದನ್ನು ನೋಡಿ ನಿವೇಶನ ಇಲ್ಲದೇ ಇರತಕ್ಕಂಥ ಬಡವರು ಹುಬ್ಬಳ್ಳಿ ಧಾರವಾಡದ ಮಹಾನಗರ ಪಾಲಿಕೆಯಲ್ಲಿ ಇದ್ದಾರೆ ಅವರಿಗೆ ತೀವ್ರಗತಿಯಲ್ಲಿ ತಾವು ಸೈಟನ್ನು ಕೊಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತಿದ್ದೇನೆ. ಕಾರ್ಪೊರೇಷನ್‌ನವರು ನಡೆಸತಕ್ಕ ಕೆಲವು ಸ್ಕೂಲ್‌ಗಳು ಇದೆ. ಈಗಾಗಲೇ ಪ್ರೆಸ್ ಕಾಲೋನಿಯಲ್ಲಿ ಸ್ಕೂಲ್ ಬಂದಿದೆ. ಅಲ್ಲಿ ದೇಣಿಗೆ

ತೆಗೆದುಕೊಳ್ಳುತ್ತಿದ್ದಾರೆ. ಲ್ಯಾಮಿಂಗ್‌ಟನ್ ಹೈಸ್ಕೂಲ್ ಎಂದು ಇದೆ. ಅದು ಕಾರ್ಪೊರೇಷನ್‌ಗೆ ಸಂಬಂಧಪಟ್ಟ ಶಾಲೆ. ಅದರ ಬಗ್ಗೆ ಮಾನ್ಯ ಸಚಿವರು ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಲೈಟ್ ಸಿಗ್ನಲ್ ಮಾಡಿದ್ದಾರೆ. ಈ ಲೈಟ್ ಸಿಗ್ನಲ್‌ಗೆ ಸಾಕಷ್ಟು ಹಣ ಖರ್ಚು ಮಾಡಿದ್ದಾರೆ. ಆದರೆ ಅದು ವರ್ಕಿಂಗ್‌ನಲ್ಲಿ ಇಲ್ಲ ಪೊಲೀಸಿನವರು ಕೆಂಪು ಲಾಟೀನ್ ಹಿಡಿದರೆ ಗಾಡಿಗಳು ನಿಲ್ಲುತ್ತವೆ, ಹಸಿರು ಲಾಟೀನ್ ಹಿಡಿದರೆ ಗಾಡಿಗಳು ಪಾಸಾಗುತ್ತದೆ. ಮೊದಲು ಪಂಚಾಯತ್ ವ್ಯವಸ್ಥೆ ಇದ್ದಾಗ ಇದ್ದಂಥ ಲಾಟೀನ್ ವ್ಯವಸ್ಥೆ ಈಗಲೂ ಇದೆ. ಇದು ಹುಬ್ಬಳ್ಳಿ ನಗರದ ಪರಿಸ್ಥಿತಿ. ಈ ಹೊಸ ಸಿಗ್ನಲ್ ವ್ಯವಸ್ಥೆಗೆ ಎಷ್ಟು ದುಡ್ಡು ಖರ್ಚು ಮಾಡಿದ್ದೀರಿ ಇದರಿಂದ ಏನು ಇಂಪ್ರೂವ್‌ಮೆಂಟ್ ಆಯಿತು. ಅದನ್ನು ಯಾಕೆ ರಿಪೇರಿ ಮಾಡುತ್ತಿಲ್ಲವೆಂಬುದನ್ನು ತಾವು ದಯಮಾಡಿ ನೋಡಬೇಕು. ಹುಬ್ಬಳ್ಳಿ ಧಾರವಾಡದ ಪಬ್ಲಿಕ್ ಜನರನ್ನು ಕರೆದು ಕೇಳಿ. ನಮ್ಮನ್ನು ಬೇಡ. ಏನು ಪರಿಸ್ಥಿತಿ ಆಗಿದೆ ಎನ್ನುವುದನ್ನು ತಾವು ವಿಚಾರ ಮಾಡಿ ಏನಾದರೂ ತಮ್ಮ ಕಾಲದಲ್ಲಿ ಒಳ್ಳೆಯದು ಆದರೆ ಮುಂದಿನ ಸಲ ನಾನು ಹೇಳುತ್ತೇನೆ. ಮಾನ್ಯ ನರಸಿಂಹಮೂರ್ತಿಯವರ ಕಾಲದಲ್ಲಿ ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ ಎಂದು ನಮ್ಮ ಕಡೆಯಿಂದ ಹೊಗಳಿಸಿಕೊಳ್ಳಬೇಕೆಂದು ಹೇಳುತ್ತೇನೆ. ಅನೇಕ ಅಭಿವೃದ್ಧಿ ಕೆಲಸದಲ್ಲಿ ಹುಬ್ಬಳ್ಳಿ ಧಾರವಾಡದ ಕೆಲಸ ಕೂಡ ತಮ್ಮ ವ್ಯಾಪ್ತಿಯಲ್ಲಿದೆ. ತಾವು ಮನಸ್ಸು ಮಾಡಿ ಹೆಚ್ಚಿನ ಅಭಿವೃದ್ಧಿಯನ್ನು ಮಾಡಬೇಕು. ಅದೂ ಅಲ್ಲದೇ ಇನ್ನೂ ಕೆಲವು ಸೂಚನೆಗಳನ್ನು ನಾನು ಕೊಡುತ್ತಾ ಇದ್ದೇನೆ. ವಿಶ್ವೇಶ್ವರ ನಗರದಲ್ಲಿ ಒಂದು ಕಲ್ಯಾಣ ಮಂಟಪ ಕಟ್ಟಬೇಕೆಂದು ಕಾರ್ಪೊರೇಷನ್‌ನವರು ಅಡಿಗಲ್ಲನ್ನು ಹಾಕಿದ್ದಾರೆ. ಅದನ್ನು ಇನ್ನೂ ಮಾಡಿಲ್ಲ. ಅದರ ಬಗ್ಗೆ ತಾವು ಗಮನ ಕೊಡಬೇಕು. ಗಟಾರಗಳ ವಿಚಾರ ಹೇಳುವುದಾದರೆ, ಮನುಷ್ಯರ ಕಾಲು ಅಲ್ಲಿ ಹೋಗುವುದಿಲ್ಲ. ಅಕಸ್ಮಾತ್ತಾಗಿ ಏನಾದರೂ ಒಂದು ಬಸ್ ಹೋದರೂ ಕೂಡ ಒಳಗಡೆ ಹೋಗುವಂತಹ ಪರಿಸ್ಥಿತಿ ಇದೆ. ತಾವು ಹುಬ್ಬಳ್ಳಿಗೆ ಬನ್ನಿ. ಹುಬ್ಬಳ್ಳಿಯಲ್ಲಿ ಕೆಲವು ಏರಿಯಾದ ಗಟಾರಗಳಲ್ಲಿ ನಮ್ಮ ಕಾಲು ಹೋಗುವುದಿಲ್ಲ, ಆದರೆ ಬಸ್ ಅದರ ಒಳಗೆ ಹೋಗುತ್ತದೆ.

ಶ್ರೀ ಟಿ. ಎಂ ಮಂಜುನಾಥ್—ತಾವು ಸಮಾಧಾನಕರವಾಗಿ ಇರಿ, ಗಟಾರವನ್ನು ಮುಚ್ಚುತ್ತಾರೆ.

ಶ್ರೀ ಪಿ.ಸಿ. ಸಿದ್ದನಗೌಡರ್.—ಇದನ್ನೆಲ್ಲಾ ತಾವು ಸ್ವತಃ ಪರಿಶೀಲನೆ ಮಾಡಿ ತೀವ್ರವಾದ ಒಂದು ಕ್ರಮವನ್ನು ತೆಗೆದುಕೊಂಡು ತಾವು ಒಳ್ಳೆಯ ಕೆಲಸವನ್ನು ಮಾಡುತ್ತೀರಿ ಎಂದು ಅಧ್ಯಕ್ಷರ ಮುಖಾಂತರ ಒತ್ತಾಯ ಮಾಡುತ್ತೇನೆ. ಇನ್ನು ಹೌಸಿಂಗ್ ಬೋರ್ಡ್ ವಿಚಾರ ಹೇಳುವುದಾದರೆ ಹುಬ್ಬಳ್ಳಿ ಧಾರವಾಡದಲ್ಲಿ ಮನೆ ಕಟ್ಟಲಿಕ್ಕೆ ಪ್ರಾರಂಭ ಮಾಡಿದ್ದಾರೆ. ತಾವು ಒಂದು ಸಲ ಹೋಗಿ ನೋಡಿ, ಆ ಮನೆಗಳ ಪರಿಸ್ಥಿತಿ ಹೇಗಿವೆ ಎಂದು ನಾನು ಹೇಳುವುದಿಲ್ಲ. ತಾವೇ ಹೇಳಿದರೆ ಬಹಳ ಸಂತೋಷ ಮುಖ್ಯವಾಗಿ ಒಳ್ಳೆಯ ಮನೆಗಳನ್ನು ಕಟ್ಟಿಸತಕ್ಕ ವ್ಯವಸ್ಥೆಯನ್ನು ತಾವು ಮಾಡಬೇಕು ನನಗೆ ತಿಳಿದ ಮಟ್ಟಿಗೆ ಕೆಲವು ಮಾತುಗಳನ್ನು ಆಡಿದ್ದೇನೆ. ನಾನು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜಿ. ರಾಜೂಗೌಡ. (ಹಾನೂರು)—ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ಪುರಸ್ಕರಿಸುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪಮಾಡಲು ಇಚ್ಛಿಸುತ್ತೇನೆ. ಅನೇಕ ಮಾನ್ಯ ಸದಸ್ಯರು ನಗರಪಾಲಿಕೆ, ನಗರಸಭೆ ಮತ್ತು ಪುರಸಭೆಗಳ ಬಗ್ಗೆ ಮಾತನಾಡಿದ್ದಾರೆ. ನಾನೂ ಕೂಡ ಅವುಗಳ ಬಗ್ಗೆ ಮಾತನಾಡಬೇಕು ಎನ್ನುವ ಇಚ್ಛೆ ಇದ್ದರೂ ಸಹ ಅದನ್ನು ಬಿಟ್ಟು ಒಳನಾಡು ಮೀನುಗಾರಿಕೆ ಬಗ್ಗೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಲು ಇಚ್ಛಿಸುತ್ತಾ ಇದ್ದೇನೆ ಶ್ರೀಮಾನ್ ನರಸಿಂಹಮೂರ್ತಿಯವರು ಈ ಒಂದು ಇಲಾಖೆಯ ಆಡಳಿತ ಸೂತ್ರವನ್ನು ತಮ್ಮ ಕೈಗೆ ತೆಗೆದುಕೊಂಡ ಮೇಲೆ ಈ ಒಂದು ಇಲಾಖೆಗೆ ಹೊಸ ಕಳೆ ಬಂದಿದೆ. ಅವರು ಇದಕ್ಕೆ ನವ ಚೈತನ್ಯವನ್ನು ತುಂಬಿದ್ದಾರೆ ಈ ಒಂದು ಇಲಾಖೆಯ ಪ್ರತಿಯೊಂದು ಘಟ್ಟದಲ್ಲೂ ಕಾಯಕಲ್ಪ ಮಾಡಬೇಕು ಎಂದು ಅವರು ನಿಶ್ಚಯಿಸಿದ್ದಾರೆ. ಕಳೆದ ಅಧಿವೇಶನದಲ್ಲಿ ಅಂದರೆ ಹಿಂದೆ ಶ್ರೀಮಾನ್ ರಘುಪತಿಯವರು ಒಳನಾಡು ಮೀನುಗಾರಿಕೆ ಸಂರಕ್ಷಣೆ ಮತ್ತು ಅಭಿವೃದ್ಧಿ ಬಗ್ಗೆ ಒಂದು ಕಾನೂನು ಮಸೂದೆಯನ್ನು ಮಂಡಿಸಬೇಕು ಎಂದು ಇಚ್ಛೆಪಟ್ಟಿದ್ದರು. ಆದರೆ ಅವರು ಮಂಡಿಸಲಿಕ್ಕೆ ಆಗಲಿಲ್ಲ ಆದ್ದರಿಂದ ದಯಮಾಡಿ ತಾವು ಆ ಕೆಲಸವನ್ನು ಆದಷ್ಟು ಬೇಗನೆ ಮಾಡಬೇಕು ಎಂದು ತಮ್ಮನ್ನು ನಾನು ಕೇಳುತ್ತಾ ಇದ್ದೇನೆ ಈ ಇಲಾಖೆ ಎಷ್ಟರ ಮಟ್ಟಿನ ಪ್ರಗತಿಯನ್ನು ಸಾಧಿಸಿದೆ ಎನ್ನುವುದನ್ನು ಆ ಇಲಾಖೆಗೆ ಒದಗಿಸಿದ ಹಣವನ್ನು ವೆಚ್ಚಮಾಡಿದ ಖಾತ್ರಿ ಮೇಲೆ ನಾವು ನಿರ್ಧರಿಸುವುದಕ್ಕೆ ಆಗುವುದಿಲ್ಲ. ಬಹುಶಃ ಈ ಇಲಾಖೆಯ ಬಗ್ಗೆ ಹೆಚ್ಚು ಆಸಕ್ತಿವಹಿಸಿ ಹೆಚ್ಚು ಮುತುವರ್ಜಿ ವಹಿಸಿ ಪ್ರತಿಯೊಂದರಲ್ಲೂ ಕೂಡ ಹೆಚ್ಚಿನ ಅಭಿವೃದ್ಧಿಯನ್ನು ಸಾಧಿಸಿದಾಗ ಆ ಇಲಾಖೆಯ ಪ್ರತಿಷ್ಠೆ ಮತ್ತು ಕೀರ್ತಿ ಹೆಚ್ಚಾಗುತ್ತದೆ ಎನ್ನುವುದನ್ನು ನಾನು

ಹೇಳುವುದಕ್ಕೆ ಇಚ್ಛೆಪಡುತ್ತಾ ಇದ್ದೇನೆ. ಈ ಮೀನುಗಾರಿಕೆ ಇಲಾಖೆಯನ್ನು ಅಭಿವೃದ್ಧಿ ಮಾಡುವುದರಿಂದ ರಾಜ್ಯದ ಆರ್ಥಿಕ ಪರಿಸ್ಥಿತಿ ಗಮನಾರ್ಹವಾಗಿ ಸುಧಾರಣೆಯಾಗುತ್ತದೆ. ಮೀನು ಬಹಳ ಉತ್ಕೃಷ್ಟವಾದದ್ದು ಹಾಗೂ ಪೌಷ್ಟಿಕ ಆಹಾರವಾಗಿರತಕ್ಕಂಥಾದ್ದು. ಅಲ್ಲದೆ ಇದು ಬಹಳ ವಿದೇಶಿ ವಿನಿಮಯವನ್ನು ಗಳಿಸುತ್ತದೆ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚಿನ ಉದ್ಯೋಗಾವಕಾಶವನ್ನು ಸೃಷ್ಟಿಮಾಡುತ್ತದೆ. ಬಹುಶಃ ನಮಗೆ ಇರತಕ್ಕಂಥ ರಾಜ್ಯದ ಒಳನಾಡಿನಲ್ಲಿ ಸುಮಾರು ೪.೫೭ ಲಕ್ಷ ಹೆಕ್ಟೇರ್ ಸಿಹಿ ನೀರಿನ ಸೌಲಭ್ಯ ಇದೆ ಈ ೪.೫೮ ಲಕ್ಷ ಹೆಕ್ಟೇರ್ ಸಿಹಿ ನೀರಿನ ಸೌಲಭ್ಯ ಏನಿದೆ, ಇದೆಲ್ಲವನ್ನೂ ಕೂಡ ಉಪಯೋಗಿಸಿಕೊಂಡು ಏಕಕಾಲದಲ್ಲಿ ಮೀನಿನ ಮರಿಗಳ ಉತ್ಪಾದನೆ ಮಾಡುವುದಾದರೆ ಬಹುಶ ಎಷ್ಟು ಕೋಟಿ ಮೀನು ನಮಗೆ ಬೇಕು ಎನ್ನುವುದರ ಬಗ್ಗೆ ಒಂದು ಸಮೀಕ್ಷೆಯನ್ನು ತಾವು ಮಾಡಬೇಕು. ಏಕೆಂದರೆ ಮೀನಿನ ಉದ್ಯಮ ಬೆಳೆಯಬೇಕಾದರೆ ಅದರ ಭದ್ರ ಬುನಾದಿಯಾಗಿ ಈ ಬಿಜೋತ್ಪಾದನಾ ಕೇಂದ್ರಗಳು ಹೆಚ್ಚಿಗೆ ಆಗಬೇಕು. ಎಷ್ಟು ಬೀಜೋತ್ಪಾದನಾ ಕೇಂದ್ರಗಳು ನಮಗೆ ಬೇಕು ಅಷ್ಟು ಬೀಜೋತ್ಪಾದನಾ ಕೇಂದ್ರಗಳು ನಮ್ಮ ಕರ್ನಾಟಕದಲ್ಲಿ ಇದೆಯೋ ಇಲ್ಲದಿದ್ದರೆ ಅದನ್ನು ಮಾಡಲಿಕ್ಕೆ ತಾವು ಯೋಚನೆ ಮಾಡಬೇಕು. ಒಳನಾಡಿನಲ್ಲಿ ನಮಗೆ ಲಭ್ಯವಿರತಕ್ಕಂಥ ಮೀನುಗಾರಿಕೆಯನ್ನು ಕೈಗೊಂಡಾಗ ಬಹುಶಃ ಎಷ್ಟು ಮೀನು ನಮಗೆ ಇವತ್ತು ದೊರೆಯುತ್ತದೆ ಅದಕ್ಕೆ ಹತ್ತು ಪಟ್ಟು ಮೀನಿನ ಉತ್ಪಾದನೆ ಜಾಸ್ತಿ ಮಾಡಲಿಕ್ಕೆ ಸಾಧ್ಯವಾಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತಾ ಇದ್ದೇನೆ ಅಷ್ಟು ಪಟ್ಟು ಹೆಚ್ಚು ಮಾಡಿದಾಗ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಅಷ್ಟೇ ಜನರಿಗೂ ಕೂಡ ನಾವು ಉದ್ಯೋಗ ಒದಗಿಸುವುದಕ್ಕೆ ಸಾಧ್ಯವಾಗುತ್ತದೆ. ಇವತ್ತಿನದಿವಸ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತ್ ಅಸ್ತಿತ್ವದಲ್ಲಿ ಬಂದಿರುವುದರಿಂದ ಈ ಮೀನಿನ ಬೇಡಿಕೆ ಜಾಸ್ತಿಯಾಗಿರುವುದರಿಂದ ತಾವು ದಯವಿಟ್ಟು ಈ ಒಂದು ಕೆಲಸಮಾಡಬೇಕು ಎಂದು ನಾನು ಸಲಹೆ ಕೊಡುತ್ತಾ ಇದ್ದೇನೆ. ಬಹುಶಃ ನಮ್ಮ ಪಕ್ಕದ ರಾಜ್ಯವಾಗಿರತಕ್ಕ ಆಂಧ್ರಪ್ರದೇಶವಲ್ಲಿ ಮತ್ತು ವೆಸ್ಟ್ ಬೆಂಗಾಲ್‌ನಲ್ಲಿ ಹಾಗೂ ಒರಿಸ್ಸಾದಲ್ಲಿ ಖಾಸಗಿಯವರಿಗೆ ಮೀನಿನ ಮರಿ ಉತ್ಪಾದನೆ ಮಾಡತಕ್ಕಂಥಾದ್ದಕ್ಕೆ ಪರವಾನಗಿ ಕೊಟ್ಟಿದ್ದಾರೆ. ತಾವು ಕೂಡ ಅದನ್ನು ಅನುಸರಿಸಿದಾಗ ನಮ್ಮ ಬೇಡಿಕೆಯನ್ನು ಕೂಡ ಪೂರ್ಣ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಬಹುಶಃ ಅದರ ಗುಣ ನಿಯಂತ್ರಣವನ್ನು ಇಲಾಖೆಗೆ ಒಳಪಡಿಸಿ. ಮೀನಿನ ಮರಿ ಉತ್ಪಾದನೆಯನ್ನು ಖಾಸಗಿಯವರಿಗೆ ಕೊಟ್ಟಾಗ ಅಂದರೆ ಅದರ ಒಳ್ಳೆಯ ಗುಣಮಟ್ಟವನ್ನು ಹತೋಟಿಗೆ ತರತಕ್ಕಂಥ ಹಾಗೂ ನಿಯಂತ್ರಣ ಮಾಡತಕ್ಕಂಥ ಒಂದು ಅವಕಾಶವನ್ನು ಇಲಾಖೆಗೆ ಕೊಟ್ಟಾಗ ಬಹುಶಃ ಹೆಚ್ಚಿನ ಮಟ್ಟದಲ್ಲಿ ನಾವು ಮೀನಿನ ಮರಿಗಳನ್ನು ಬೇಡಿಕೆದಾರರಿಗೆ ನೀವು ಕೊಡಲಿಕ್ಕೆ ಸಾಧ್ಯವಾಗುತ್ತದೆ. ಹೆಚ್ಚಿನ ಮತ್ಸ್ಯ ಸಂಪತ್ತೂ ಕೂಡ ರಾಜ್ಯದಲ್ಲಿ ಹೆಚ್ಚಾಗುತ್ತದೆ. ಮತ್ತೆ ನಾವು ವಿದೇಶಿವಿನಿಮಯವನ್ನು ಜಾಸ್ತಿ ಗಳಿಸಿದ ಹಾಗೆ ಆಗುತ್ತದೆ. ಅಲ್ಲದೆ ಗ್ರಾಮಾಂತರ ಪ್ರದೇಶಗಳಲ್ಲಿ ಜನರಿಗೆ ಉದ್ಯೋಗ ಕೊಟ್ಟಹಾಗೆ ಆಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಯಾವರೀತಿ ರೇಷ್ಮೆ ಬಿತ್ತನೆ ಮೊಟ್ಟೆಯನ್ನು ಖಾಸಗಿಯವರಿಗೆ ಪರವಾನಗಿ ಕೊಟ್ಟು ಅದರಿಂದ ಬೇಡಿಕೆಯನ್ನು ಪೂರೈಸುತ್ತೇವೆಯೋ ಅದೇ ಒಂದು ಹಾದಿಯಲ್ಲಿ ತಾವು ಇದನ್ನೂ ಮಾಡಬೇಕು ಎಂದು ನಿಮ್ಮನ್ನು ಕಳಕಳಿಯಿಂದ ಕೇಳಲಿಕ್ಕೆ ಇಚ್ಛೆಪಡುತ್ತಾ ಇದ್ದೇನೆ. ಮತ್ತು ಬೇಡಿಕೆ ಕೂಡ ಸಕಾಲದಲ್ಲಿ ಪೂರೈಸಲಿಕ್ಕೆ ಸಾಧ್ಯವಾಗುತ್ತದೆ. ನಮ್ಮಲ್ಲಿರತಕ್ಕಂಥ ಮೀನುಗಳು ಯಾವುವು ಎನ್ನುವುದರ ಬಗ್ಗೆ ಸ್ವಲ್ಪ ನಾವು ಗಮನ ಹರಿಸಿದಾಗ ನಾವು ನಾಲ್ಕು ಜಾತಿಯ ಮೀನುಗಳನ್ನು ನಾವು ಹೊರದೇಶದಿಂದ ತಂದಿದ್ದೇವೆ. ಅವುಯಾವುವೆಂದರೆ ಕಾಟ್ಲಾ ರೋಹು, ಮೃಗಾಲು ಮತ್ತು ಕಮರ್ಕರು ಈ ಮೃಗಾಲು ಮತ್ತು ರೋಹುಗಳ ಸಂಕಲನದಿಂದ ಹೊಸ ತಳಿಯನ್ನು ನಾವು ಉತ್ಪಾದನೆ ಮಾಡಿದ್ದೇವೆ. ಆದರೆ ಅದನ್ನು ಹೆಚ್ಚಿನ ಉತ್ಪಾದನೆ ಮಾಡಲಿಕ್ಕೆ ಆಗುವದಿಲ್ಲ ಎನ್ನತಕ್ಕಂಥ ವಿಷಯವನ್ನು ನಾನು ಹೇಳಲಿಕ್ಕೆ ಇಚ್ಛೆಪಡುತ್ತಾ ಇದ್ದೇನೆ,

ಈ ಬಗ್ಗೆ ನನ್ನ ಅಭಿಪ್ರಾಯ ಏನೆಂದರೆ, ವಿದೇಶದಿಂದ ತಂದಿರುವಂಥ ತಳಿ ಏನಿದೆ, ಅದನ್ನು ನಮ್ಮ ನಾಟಿ ತಳಿಗಳ ಜೊತೆಯಲ್ಲಿ ಸಂಕೀರ್ಣ ಮಾಡಿ ಅದರ ಮುಖಾಂತರ ಕಡಿಮೆ ವೆಚ್ಚದಲ್ಲಿ ಹೆಚ್ಚಿನ ಉತ್ಪಾದನೆ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಇದರ ಬಗ್ಗೆ ಸಂಶೋಧನೆ ನಡೆಸಬೇಕು. ತಮ್ಮ ಸಂಶೋಧನಾ ಕೇಂದ್ರವನ್ನು ಈ ದಿಶೆಯಲ್ಲಿ ಒಳಪಡಿಸಬೇಕೆಂದು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಸುಮಾರು ೧೨೪ ತಳಿಯ ಮೀನುಗಳು ಇವೆ. ಅದರಲ್ಲಿ ಬಹುಮುಖ್ಯವಾಗಿ ಕೂಡ್ಲು, ಗೆಂಡೆ, ಮಂಚ್ಳು, ಕೆಮ್ಮೀನು, ಬಿಳಿ ಮೀನು, ಚೇಳು ಮೀನು ಹಾಗೂ ಹಾವು ಮೀನು. ಈ ಜಾತಿ ಮೀನುಗಳನ್ನು ಕೆರೆ ಕುಂಟೆಗಳಲ್ಲಿ ಬೆಳೆಸಿದರೆ ಹೆಚ್ಚು ಲಾಭದಾಯಕವೂ ರುಚಿಕರವೂ ಆಗಿರುತ್ತದೆ. ನಮ್ಮ ರಾಜ್ಯದಲ್ಲಿ ಒಳನಾಡು ಮೀನುಗಾರಿಕೆಯಿಂದ ಸುಮಾರು ೬೦,೦೦೦ ಟನ್ ಮೀನು ದೊರೆಯುತ್ತದೆ, ಒಂದು ಕೆ. ಜಿ. ಮೀನಿಗೆ

೫ ರೂಪಾಯಿ ಆದರೂ ಕೂಡ ನಾವು ೩೦ ಕೋಟಿ ರೂಪಾಯಿ ಸಂಪಾದನೆ ಮಾಡುವುದಕ್ಕೆ ಸಾಧ್ಯವಿದೆ. ಅದೇರೀತಿ ಸಮುದ್ರದಲ್ಲಿ ಹಿಡಿಯುವ ಮೀನಿನ ಪ್ರಮಾಣ ಸುಮಾರು ಒಂದು ಲಕ್ಷ ೬೦ ಸಾವಿರ ಟನ್. ಇದರಿಂದ ೫೦ ಕೋಟಿ ರೂಪಾಯಿಗಳನ್ನು ಗಳಿಸುತ್ತಿದ್ದೇವೆ. ನಮಗೆ ಗೊತ್ತಿರುವಂತೆ ೧೫-೨೦ ವರ್ಷಗಳ ಹಿಂದೆ ಕಾವೇರಿ ನದಿಯಲ್ಲಿ ಹೇರಳವಾಗಿ ನಮ್ಮ ನಾಡ ತಳಿಯ ಮೀನುಗಳು ಸಿಗುತ್ತಿತ್ತು. ಇತ್ತೀಚೆಗೆ ಜಲಮಾಲಿನ್ಯದಿಂದ ಈ ಸಂತತಿ ನಶಿಸಿ ಹೋಗಿ ಸಿಗುತ್ತಿಲ್ಲ. ಜಲಮಾಲಿನ್ಯದಿಂದ ಮೀನುಗಳನ್ನು ರಕ್ಷಿಸುವುದಕ್ಕೆ ಪ್ರಯತ್ನ ಮಾಡಬೇಕು. ಬಹಳ ಮುಖ್ಯವಾಗಿ ಸೀಗಡಿ ಮೀನು ಬಹಳ ರುಚಿಕರವಾದ ಪದಾರ್ಥ. ಕಾವೇರಿ ನದಿಯಲ್ಲಿ ಈ ಒಂದು ನಾಟಿ ಸೀಗಡಿ ಮೀನೂ ಹೇರಳವಾಗಿ ಸಿಗುತ್ತಿತ್ತು. ಆದರೆ ಇತ್ತೀಚೆಗೆ ಜಲಮಾಲಿನ್ಯದಿಂದ ಇದೂ ಕೂಡ ಕಡಿಮೆಯಾಗಿ ಈ ಒಂದು ಸಂತತಿ ನಶಿಸಿಹೋಗಿದೆ. ಸೂಕ್ತ ಸ್ಥಳದಲ್ಲಿ ತಾವು ಸೀಗಡಿ ಮೀನುಗಳನ್ನು ಬೆಳೆಯುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಧಾರವಾಡದಲ್ಲಿ ಕೋಳಿ ಸಾಕಾಣಿಗೆ ಮಾಡಿದಂತೆ ಸೀಗಡಿಯನ್ನೂ ಕೂಡ ಬೆಳೆಸುತ್ತಿದ್ದಾರೆ. ೬೦×೪೦ ಅಡಿ ಪಾತಿಗಳನ್ನು ಮಾಡಿ ನೀರನ್ನು ತುಂಬಿ ಸೀಗಡಿ ಬೆಳೆಯುತ್ತಾರೆ. ಒಂದು ಎಕರೆ ಪ್ರದೇಶದಲ್ಲಿ ಸುಮಾರು ನೂರು ಸಾವಿರ ಕೇಜಿ ಸೀಗಡಿಯನ್ನು ಬೆಳೆಯುತ್ತಾರೆ. ಇವತ್ತು ಬೆಂಗಳೂರಿನಲ್ಲಿ ಒಂದು ಕೆ ಜಿ. ಸೀಗಡಿ ಮೀನಿಗೆ ೧೦-೧೨ ರೂ. ಬೆಲೆ ಇದೆ. ಬೇರೆ ಯಾವುದೇ ಆಹಾರ ಪದಾರ್ಥವನ್ನು ಬೆಳೆದರೂ ಇಷ್ಟು ಲಾಭದಾಯಕವಾಗಿಲ್ಲ. ಇದರಿಂದ ಸುಮಾರು ೩೦,೦೦೦ ರೂ. ಸಂಪಾದನೆ ಬರುತ್ತದೆ. ಇದಕ್ಕೆ ಯಾವುದೇ ರೀತಿಯ ರೋಗ ರುಜಿನಗಳು ಬರುವುದಿಲ್ಲ. ರಾಜ್ಯದಲ್ಲಿ ತೋಟಗಾರಿಕೆ ಬೆಳೆಗಳನ್ನು ಹಣ್ಣು ಹೂವುಗಳನ್ನು ಪ್ರದರ್ಶನ ರೂಪದಲ್ಲಿ ಏರ್ಪಡಿಸಿದಂತೆ ಅದೇರೀತಿ ಸೀಗಡಿ ಮೀನನ್ನು ಬೆಳೆಸುವುದನ್ನು ಪ್ರದರ್ಶನ ರೂಪದಲ್ಲಿ ಏರ್ಪಡಿಸಿ ಸಾರ್ವಜನಿಕರನ್ನು ಆಕರ್ಷಿಸಬೇಕು. ಇದರಿಂದ ಹೆಚ್ಚಿನ ಆಹಾರವೂ ಉತ್ಪತ್ತಿಯಾಗುತ್ತದೆ ಇದರಿಂದ ಲಾಭಪ್ರಾಪ್ತಿಯಾಗುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಕೊಳವೆಬಾವಿಗಳನ್ನು ಶೇಕಡ ೬೦ರಷ್ಟು ಸಬ್ಸಿಡಿ ರೂಪದಲ್ಲಿ ಕೊಡುವುದರಿಂದ ಆ ಒಂದು ವರ್ಗದವರಿಗೆ ತಮ್ಮ ಇಲಾಖೆಯಿಂದ ಬೋರ್ ವೆಲ್‌ಗಳನ್ನು ಹಾಕಿಸಿ, ಈ ಸೀಗಡಿ ಬೆಳೆಯುವುದಕ್ಕೆ ಅವಕಾಶ ಮಾಡಿಕೊಡಲು ಸೂಕ್ತ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ರಾಷ್ಟ್ರೀಯ ಕಲ್ಯಾಣ ಯೋಜನೆಯ ಪ್ರಕಾರ ತಾವು ಈ ಇಲಾಖೆಯನ್ನು ವಹಿಸಿಕೊಂಡಮೇಲೆ ಮೀನುಗಾರರಿಗೆ ಸುಮಾರು ೫೦೦ ಮನೆಗಳ ನಿರ್ಮಾಣಕ್ಕೆ ಪ್ರಯತ್ನ ಮಾಡಿದ್ದೀರಿ. ಬಹಳ ಒಳ್ಳೆಯ ಕೆಲಸ. ಆದರೆ ನನ್ನ ಆತಂಕ ಏನೆಂದರೆ ತಾವು ಕಟ್ಟತಕ್ಕ ಮನೆಗಳು ೭-೮ ಅಡಿಯ ಒಂದು ಹಾಲು, ೬-೬ ಅಡಿಯ ಒಂದು ಬಾತ್‌ರೂಮು, ೭-೭ ಅಡಿಯ ಒಂದು ಅಡಿಗೆ ಮನೆ ಇದರ ಬೆಲೆ ೧೭,೦೦೦ ರೂ.ಗಳು. ಈ ಒಂದು ಕೆಲಸವನ್ನು ಭೂ ಸೇನಾ ನಿಗಮದವರಿಗೆ ಕೊಟ್ಟಿದ್ದೀರಿ ಇದರಿಂದ ಏನು ಅನುಕೂಲ ಇಲ್ಲ. ಏಕೆಂದರೆ ಇಬ್ಬರೂ ಸಹ ಮಲಗುವುದಕ್ಕಾಗುವುದಿಲ್ಲ. ಇದನ್ನು ಕ್ಯಾನ್ಸಲ್ ಮಾಡಿ, ಸಹಕಾರ ಸಂಘಗಳಿಗೆ ಕೊಡಿ, ಟೆಂಡರ್ ಕರೆದುಕೊಡಿ. ಸ್ಥಳದಲ್ಲಿಯೇ ಇರತಕ್ಕ ಮೆಟೀರಿಯಲ್ಸ್ ಬಳಸಿ ಮನೆ ಕಟ್ಟುವುದಕ್ಕೆ ಅವಕಾಶ ಮಾಡಿಕೊಟ್ಟರೆ ಹೆಚ್ಚಿನ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಎನ್. ಸಿ. ಡಿ. ಸಿ. ಅಂದರೆ ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮದ ಕೆಳಗೆ ಮೈಸೂರು ಜಿಲ್ಲೆಯಲ್ಲಿ ಕೆರೆ ಮೀನುಗಾರಿಕೆಯ ಯೋಜನೆ ಮಂಜೂರು ಮಾಡಿದ್ದೀರಿ. ಆದರೆ, ಕೆಲಸ ಇನ್ನೂ ಪ್ರಾರಂಭವಾಗಿಲ್ಲ. ಸರ್ಕಾರದಲ್ಲಿ ಸಿಬ್ಬಂದಿಯನ್ನು ನೇಮಕ ಮಾಡುವಂಥ ಪ್ರಸ್ತಾವನೆ ಇದೆಯೆಂದು ಕೇಳಿದ್ದೇವೆ. ತರಬೇತಿ ಹೊಂದಿದವರನ್ನು ನೇಮಕ ಮಾಡಿ. ಮೀನಿನ ಮರಿಗಳನ್ನು ಕೆರೆಗೆ ಬಿಟ್ಟು ಅವುಗಳ ಅಭಿವೃದ್ಧಿಯನ್ನು ಹೆಚ್ಚಿಸಬೇಕೆಂದು ಹೇಳುತ್ತೇನೆ. ಗುಂಡಾಲು, ನುಗು ಹಾಗೂ ಕಬಿನಿ ಮೀನು ಮರಿ ಉತ್ಪಾದನೆ ಕೇಂದ್ರಗಳನ್ನು ಜಿಲ್ಲಾ ಪರಿಷತ್ತಿನಿಂದ ತಮ್ಮ ಇಲಾಖೆಗೆ ವಹಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಎಲ್ಲೆಲ್ಲಿ ಮೀನು ಮರಿಗಳನ್ನು ಉತ್ಪಾದನೆ ಮಾಡಲಾಗುತ್ತದೆಯೋ ಅಲ್ಲೆಲ್ಲಾ ಮೀನುಗಾರರ ಸಹಕಾರ ಸಂಘಗಳನ್ನು ಸ್ಥಾಪಿಸಬೇಕು. ಈಗಿರುವ ಮೀನುಗಾರರ ಸಹಕಾರ ಸಂಘಗಳಿಗೆ ಉತ್ತೇಜನ ಕೊಡಬೇಕು. ದುಡಿಯತಕ್ಕ ಬಂಡವಾಳಕ್ಕೆ ಹಣ ಸಹಾಯ ಮಾಡಬೇಕು. ಈ ಮೀನಿನ ಉದ್ಯಮಕ್ಕೆ ಹೆಚ್ಚು ಹೆಚ್ಚು ಜನರನ್ನು ಆಕರ್ಷಿಸಬೇಕು, ಮೀನುಗಾರರು ಮೀನು ಹಿಡಿಯುವುದಕ್ಕೆ ಹೋದಾಗ ಅಕಾಲ ಮರಣಕ್ಕೆ ತುತ್ತಾದಾಗ ೫೦೦೦ ರೂಪಾಯಿ ಪರಿಹಾರ ಕೊಡುತ್ತೀರಿ, ಇದನ್ನು ೨೦,೦೦೦ಕ್ಕೆ ಹೆಚ್ಚಿಸಬೇಕು. ಈ ಮೀನುಗಾರರು ಯಾರು ಎಂಬ ಬಗ್ಗೆ ತಾಲ್ಲೂಕು ಮತ್ತು ರಾಜ್ಯಮಟ್ಟದಲ್ಲಿ ರಿಜಿಸ್ಟರ್ ಮಾಡಿಸಬೇಕು. ಇದರಿಂದ ಯಾರಾದರು ಸತ್ತರೆ ಕೂಡಲೇ ಪರಿಹಾರ ಕೊಡಲು ತಮಗೆ ಅನುಕೂಲವಾಗುತ್ತದೆ.

ಇನ್ನು ಪುರಸಭೆ ಬಗ್ಗೆ ನಾನು ಹೆಚ್ಚು ಹೇಳಲಿಕ್ಕೆ ಇಷ್ಟಪಡುವುದಿಲ್ಲ. ಈಗ ಏನು ಪುರಸಭೆ ಚುನಾವಣೆ ನಡೆದಿದೆ, ಅಲ್ಲಿನ ಆಡಳಿತಮಂಡಲಿಗೆ ಸ್ಥಳೀಯ ಶಾಸಕರನ್ನೂ ಕೂಡ ಪದನಿಮಿತ್ತ ಸದಸ್ಯರೆಂದು ನೇಮಿಸಬೇಕು. ಮತ್ತೆ ತಾವು ಏನು ಬಡವರಿಗೆ ನಿವೇಶನ ಹಂಚಲಿಕ್ಕೆ ಭೂಸ್ವಾಧೀನ ಪಡಿಸಿಕೊಳ್ಳುತ್ತೀರಿ, ಆಗಲೇ ಅವರಿಗೆ ಅವಾರ್ಡ್ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಇಲ್ಲ

ದಿದ್ದರ ಸರ್ಕಾರ ಹನ್ನೆರಡೂವರೆ ಪರ್ಸೆಂಟ್ ಬಡ್ಡಿಯನ್ನು ರಾಜ್ಯವರಿಷ್ಟ ನ್ಯಾಯಾಲಯ ತೀರ್ಮಾನ ದಂತೆ ಕೊಡಬೇಕಾಗುತ್ತದೆ. ಇದು ಈಗ ಕೊಡತಕ್ಕಂಥ ಪರಿಹಾರದ ಹಣಕ್ಕಿಂತಲೂ ಮೂರು ನಾಲ್ಕು ಪಟ್ಟು ಜಾಸ್ತಿ ಖರ್ಚು ಆಗುತ್ತದೆ. ಇದರಿಂದ ಸರ್ಕಾರಕ್ಕೆ ಬಹಳ ಲುಕ್ಸಾನು ಆಗಿದೆ. ಈ ದುರಭ್ಯಾಸವನ್ನು ನಿಲ್ಲಿಸಬೇಕು. ತಾವು ಯಾವಾಗ ನಿವೇಶನ ಸ್ವಾಧೀನಕ್ಕೆ ತೆಗೆದುಕೊಳ್ಳುತ್ತೀರೋ ಆ ತಕ್ಷಣ ರೈತನಿಗೆ ದುಡ್ಡು ಕೊಡಬೇಕೆಂದು ತೀರ್ಮಾನ ಮಾಡಬೇಕೆಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಂ ಇದಿನಬ್ಬ (ಉಲ್ಲಾಳ್).—ಸನ್ಮಾನ್ಯ ಅಧ್ಯಕ್ಷರೆ, ಈ ದಿವಸ ಮೀನುಗಾರಿಕಾ ಸಚಿವರು ತಂದಿರತಕ್ಕಂಥ ಬೇಡಿಕೆಯನ್ನು ಪುರಸ್ಕರಿಸಿ ಕೆಲವು ಮಾತುಗಳನ್ನು ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ. ಸಮಯ ಬಹಳ ಕಡಿಮೆಯಾದುದರಿಂದ ನಾನು ಮೀನುಗಾರಿಕೆಯ ಬಗ್ಗೆ ಮಾತ್ರ ಮಾತನಾಡುತ್ತಿದ್ದೇನೆ. ನಾವು ಸಮುದ್ರದ ಬದಿಯಲ್ಲಿರತಕ್ಕವರು, ಮೀನುಗಾರರ ಜೊತೆಯಲ್ಲಿ ಇರತಕ್ಕವರು. ಕಡಲಿನ ತೆರೆಯಿಂದ ಬಂದಂಥ ಹಸಿಹಸಿ ಮೀನುಗಳ ರಾಶಿಯನ್ನು ನೋಡಿದವರು ಮತ್ತು ಆ ಮೀನುಗಳನ್ನು ಕೂಡ ತಿಂದವರು. ನಾವು ಆ ಬಗ್ಗೆ ಯಾವಾಗಲೂ ನೋಡತಕ್ಕ ವಿಷಯವಾದ್ದರಿಂದ ಮೀನುಗಾರರ ಬಗ್ಗೆ ಇರತಕ್ಕಂಥ ಅನುಕಂಪವನ್ನು ನಾನು ಹೇಳಬೇಕಾಗಿದೆ. ಇವೊತ್ತು ನಮ್ಮ ಉಳ್ಳಾಲದಲ್ಲಿ ನಾಲ್ಕು ಸಾವಿರ ಜನ ಅದೇರೀತಿ ಬೆಂಗರೆಯಲ್ಲಿ ಐದಾರು ಸಾವಿರ ಜನ ಆದೇರೀತಿ ಕುಂದಾಪುರದ ಕರಾವಳಿಯಲ್ಲಿರತಕ್ಕ ಮೀನುಗಾರರು, ಅದೇರೀತಿ ಉತ್ತರಕನ್ನಡದಲ್ಲಿರತಕ್ಕ ಮೀನುಗಾರರು ಬಹಳವಾಗಿ ದುಡಿಯತಕ್ಕಂಥ ಬಡವರು. ಆದರೆ ಅವರ ಬಗ್ಗೆ ಕಳಕಳಿ ಯಾರಿಗೂ ಇಷ್ಟರವರೆಗೆ ಬರಲಿಲ್ಲ. ಆದರೆ ಇವೊತ್ತು ನಮ್ಮ ನರಸಿಂಹಮೂರ್ತಿ ಅವರು ಮಂತ್ರಿಗಳಾಗಿ ಬಂದಮೇಲೆ ಅವರು ಹೆಚ್ಚಿನ ನಿಗಾ ಇಟ್ಟು ಆ ಬಡವರನ್ನು ಯಾವುದೇ ರೂಪದಲ್ಲಿ ಮುಂದೆ ತರಬೇಕು, ಅವರ ಆರ್ಥಿಕ ಸ್ಥಿತಿಯನ್ನು ಒಳ್ಳೆಯದು ಮಾಡಬೇಕು, ಎನ್ನುವ ಅಭಿಪ್ರಾಯ ಹೊಂದಿದ್ದಾರೆ ಎಂಬುದು ಅವರ ಕಾರ್ಯಕ್ರಮದಿಂದ ತಿಳಿದು ಬಂದಿದೆ. ಅವರ ಮಾತಿನಲ್ಲಿ ಸಹ ಇದು ತಿಳಿದುಬಂದಂಥ ವಿಚಾರವಾಗಿದೆ. ಹಿಂದೆ ಏನಾಗಿದೆ ಅಂದರೆ, ಹಿಂದಿನ ಮಂತ್ರಿಗಳು ಕೆಲಸ ಮಾಡುತ್ತಿದ್ದರು. ಆದರೆ, ನಾಲ್ಕು ವರ್ಷಗಳಲ್ಲಿ ನಾಲ್ಕು ಜನ ಮಂತ್ರಿಗಳು ಆದರು, ಒಮ್ಮೆ ಕೃಷ್ಣರೆಡ್ಡಿಯವರು ಇದ್ದರು. ಒಂದು ವರ್ಷ ಆದಮೇಲೆ ಅವರನ್ನು ತಪ್ಪಿಸಿದರು. ಮತ್ತೊಬ್ಬರು ಬೈರೇಗೌಡರು ಬಂದರು. ಅವರು ಬಂದು ನಮ್ಮ ಇಡೀ ಬೆಂಗೇರಿಯಲ್ಲಿ ಸುತ್ತಾಡಿ ಬಂದರು. ಮತ್ತೊಮ್ಮೆ ಅವರು ಬರುವುದರಲ್ಲಿ ಅವರು ತಪ್ಪಿ ಹೋದರು. ಮತ್ತೆ ರಘುಪತಿಯವರು ಬಂದರು. ಈ ರೀತಿಯಲ್ಲಿ ಮೀನಿನ ಗುಟ್ಟನ್ನೇ ಹಿಡಿದು, ಆ ಮೀನುಗಾರರಿಗೆ ಉಪಕಾರ ಮಾಡತಕ್ಕಂಥ ಕಾರ್ಯಕ್ರಮ ಜಾರಿ ಮಾಡಲಿಕ್ಕೆ ಅವರಿಗೆ ಆಗಲಿಲ್ಲ. ಆದ್ದರಿಂದ, ಇದು ಬಹಳ ದೀರ್ಘವಾದಂಥ ವಿಚಾರ. ಏಕೆಂದರೆ ಮೀನುಗಾರರು ಕುಳಿತುಕೊಂಡು ನಮ್ಮ ಬೆಂಗರೆ ಮತ್ತು ಬೇರೆ ಬೇರೆ ಕಡೆಗಳಲ್ಲಿ ೪೦೦ ಜನ ಬಡವರು ಮನೆ ಕಟ್ಟಿ ಕುಳಿತುಕೊಂಡಿದ್ದಾರೆ. ಅವರಿಗೆ ಇನ್ನೂ ಲೈಸೆನ್ಸ್ ಸಿಕ್ಕಿಲ್ಲ. ಅವರಿಗೆ ಹಕ್ಕುಪತ್ರ ಸಿಕ್ಕಿಲ್ಲ. ಅವರಿಗೆ ಮನೆ ನಮ್ಮದು ಎಂದು ಆಗಿಲ್ಲ. ನಾಳೆ ಅವರು ಎದ್ದು ಹೋಗಬೇಕೆಂದರೆ ಎಲ್ಲಿ ಹೋಗಬೇಕು. ಮೀನು ಹಿಡಿಯತಕ್ಕ. ಸಮುದ್ರದ ಬದಿಯಲ್ಲಿ ಇರತಕ್ಕ ಜನ ಗುಡ್ಡಕ್ಕೆ ಆಗಲಿ, ಪರ್ವತಕ್ಕೆ ಆಗಲಿ. ಹೋಗಲಿಕ್ಕೆ ಆಗುವುದಿಲ್ಲ. ಅವರು ಸಮುದ್ರದ ಬದಿಯಲ್ಲಿಯೇ ಇರಬೇಕಾಗುತ್ತದೆ, ಅವರಿಗೆ ಏನೂ ವ್ಯವಸ್ಥೆ ಆಗಿಲ್ಲ. ಇನ್ನು ಈ ಬಂದರು ಅಧಿಕಾರಿಗಳು ಒಮ್ಮೊಮ್ಮೆ ಅವರ ಹತ್ತಿರ ಹೋಗಿ ಜೋರು ಮಾಡುವುದು, ಉಪಟಳ ಕೊಡುವುದು, ಬಂದಕ್ಕೆ ಹತ್ತುಪಾಲು ದರ ಏರಿಸಿ, ಅದು ಒಂದು ದೊಡ್ಡ ಬಂದರು ಆದಾಗ ನಾವು ಮಂತ್ರಿಗಳ ಹತ್ತಿರ ಬಂದು ನಿವೇದಿಸಿಕೊಂಡೆವು. ಮೀನು ಹಿಡಿಯುತಕ್ಕಂಥ ಬಡವರು ೨೪ ಗಂಟೆಗಳ ಕಾಲ ಹಗಲಿರುಳು ಕಡಲಲ್ಲಿ ದುಡಿಯತಕ್ಕಂಥ ಜನ, ಬಿಸಿಲು ಮಳೆಯನ್ನು ಸಹ ಲೆಕ್ಕಿಸದೆ, ಕೆಲಸ ಮಾಡತಕ್ಕಂಥ ಜನ ಏನಿದ್ದಾರೆ ಇವರಿಗೆ ಅನ್ಯಾಯ ಹೆಚ್ಚಿದೆ ಎಂದು ಹೇಳಿದಾಗ ಆದರವನ್ನು ಕಡಿಮೆ ಮಾಡಲಿಕ್ಕೆ ಅವರು ಆಗಲೇ ಆದೇಶವನ್ನು ಕೊಟ್ಟರು. ಆ ಒಂದು ಕಾರ್ಯಕ್ರಮಕ್ಕೆ ಅವರು ಮುಂದಾದದ್ದು ನಮ್ಮ ನೆನಪಿಗೆ ಬರುತ್ತದೆ. ಆದ್ದರಿಂದ, ಇವೊತ್ತು ಏನಾಗಿದೆ ಅಂದರೆ, ನಮ್ಮ ಈ ಕರಾವಳಿಯಲ್ಲಿರತಕ್ಕ ಮೀನುಗಾರರನ್ನು ಒಳ್ಳೆಯ ರೀತಿಯಲ್ಲಿ ಆರ್ಥಿಕ ಸ್ಥಿತಿಯಲ್ಲಿ ಮುಂದೆ ತರಬೇಕೆಂದು, ಹೇಳುವಾಗ ನಮ್ಮನ್ನು ಒಮ್ಮೊಮ್ಮೆ ನೀವು ಮೀನು ತಿನ್ನತಕ್ಕವರು, ದಕ್ಷಿಣಕನ್ನಡದವರು ಬಹಳ ಬುದ್ಧಿವಂತರು, ಎಂದು ಪುಸಲಾಯಿಸಿ ನಮಗೆ ಬೇಕಾದಂಥ ಸವಲತ್ತು ಸಿಕ್ಕುವುದು ಬಹಳ ಕಡಿಮೆಯಾಗಿದೆ. ಆದ್ದರಿಂದ, ಆ ಸವಲತ್ತು ಕೊಡಬೇಕೆಂದು ಕೇಳುತ್ತಿದ್ದೇನೆ, ಏಕೆಂದರೆ ಸರ್ಕಾರಕ್ಕೆ ೩೫ ಕೋಟಿ ರೂಪಾಯಿ ಕಡಲಿನ ಮೀನಿನಿಂದ ಸಿಕ್ಕುತ್ತದೆ. ಅದು ಮೀನು ಅಲ್ಲ ಚಿನ್ನ. ೩೫ ಕೋಟಿ ರೂಪಾಯಿ ಸರ್ಕಾರಕ್ಕೆ ಲಾಭ ಆಗತಕ್ಕ ಪರಿಸ್ಥಿತಿ ಇದೆ, ಮೊದಲು ೨೦ ವರ್ಷಕ್ಕಿಂತಲೂ ಮೊದಲು ಬಲೆಗಳನ್ನು ಹಾಕಿ ಮೀನುಗಳನ್ನು ಹಿಡಿಯತಕ್ಕಂತದ್ದು ಇತ್ತು. ಆದರೆ, ಈಗ ಮಾತ್ರ ಹಾಗೆ ಇಲ್ಲ. ೨೭೬ ಪರ್ಸೀನ್ ಬೋಟ್‌ಗಳಿವೆ. ೧೫೫೦ ಟ್ರಾಲರ್‌ಗಳಿವೆ. ಅವು

ಸಾಲಾಗಿ ನಿಂತಿದ್ದು ನೋಡಿದರೆ ಈಗ ಎಷ್ಟು ಅಭಿವೃದ್ಧಿಯಾಗಿದೆ, ಸರ್ಕಾರ ಎಷ್ಟೊಂದು ಕೆಲಸಮಾಡಿದೆ ಎಂದು ಹೇಳುವಂಥಾದ್ದು ನಮಗೆ ಮನವರಿಕೆಯಾಗುತ್ತದೆ. ಆದ್ದರಿಂದ ನಾನು ಹೇಳುವಂಥಾದ್ದು ಅವರಿಗೆ ನಮ್ಮ ಬೆಂಗರೆ, ಉಳ್ಳಾಲ ಮುಂತಾದ ಬೇರೆ ಬೇರೆ ಕಡೆಗಳಲ್ಲಿ ಕುಳಿತುಕೊಂಡಿರುವವರಿಗೆ, ಅವರು ಕುಳಿತುಕೊಂಡಿರುವ ಸ್ಥಳವನ್ನು ಖಾಯಂ ಮಾಡಬೇಕು. ಅವರಿಗೆ ಲೈಸೆನ್ಸ್ ಕೊಡಬೇಕು. ಇದು ಬಹಳ ಪ್ರಾಮುಖ್ಯವಾದಂಥ ವಿಚಾರ, ಇನ್ನು ಹೂಳು ಎತ್ತುವುದು, ಅಳಿವೆಬಾಗಿಲಿನಲ್ಲಿ ಮರಳುಬಿದ್ದು ಯಾವಾಗಲೂ ಮೀನುಗಾರರ ಬೋಟುಗಳು ತಾಗಿ ಸಾಧಾರಣ ಎರಡು ಮೂರು ವರ್ಷದಲ್ಲಿ ೧೦–೨೦ ಬೋಟುಗಳು ನಾಶವಾಗಿವೆ, ೧೦ ಲಕ್ಷ, ೫ ಲಕ್ಷ, ೬, ಲಕ್ಷ ಹೀಗೆ ಈ ಬೋಟುಗಳು ಬೆಲೆ ಬಾಳುತ್ತಿದ್ದವು.

೫–೪೫ ಪಿ. ಎಂ.

ಹಾಗೂ ಹತ್ತಿಪ್ಪತ್ತು ಜನ ತೀರಿ ಹೋದರು. ಎಷ್ಟೋ ನಷ್ಟವಾಯಿತು ಹೂಳೆತ್ತಬೇಕೆಂದು ೫ ವರ್ಷದಿಂದ ನಾವು ಕೇಳುತ್ತಿದ್ದೇವೆ. ಹೂಳೆತ್ತುವ ಯಂತ್ರ ಇದುವರೆಗೂ ಬರಲಿಲ್ಲ. ನಾಳೆ ಬರುತ್ತದೆ ಬರುವ ವರ್ಷ ಬರುತ್ತದೆಂದು ಹಿಂದಿನ ಎಲ್ಲಾ ಮೀನುಗಾರಿಕೆ ಮಂತ್ರಿಗಳು ಹೇಳಿಕೊಂಡು ಬಂದಿದ್ದಾರೆ. ಆದರೆ ನಮ್ಮ ಈಗಿನ ಮೀನುಗಾರಿಕೆ ಮಂತ್ರಿಗಳ ಕಾಲದಲ್ಲಾದರೂ ಕೂಡ ಈ ಹೂಳೆತ್ತುವ ಕೆಲಸ ಆಗಬೇಕು ಮತ್ತು ಕಳೆದ ೫–೬ ವರ್ಷದಿಂದ ನಾವು ಯಾವುದನ್ನು ಕೇಳುತ್ತಿದ್ದೇವೊ ಆ ಕಾರ್ಯಕ್ರಮ ಆಗಲಿಕ್ಕೆ ಅವರು ಮುಂದೆ ಬರಬೇಕೆಂದು ಹೇಳುತ್ತೇನೆ. ಏಕೆಂದರೆ ಬಹಳ ಜನ ಮೀನುಗಾರರು ಹಾನಿಯಾಗಿದ್ದಾರೆ. ಹಾಗೂ ತೊಂದರೆಗೊಳಗಾಗಿದ್ದಾರೆ. ಇನ್ನು ಬಂದರಿನಲ್ಲಿ ಮೀನಿನ ಧಕ್ಕೆ ಆಗಬೇಕು, ಸುಮಾರು ವರ್ಷದಿಂದ ಕೇಳುತ್ತಿದ್ದೇನೆ. ಆದರೂ ಆಗಿಲ್ಲ, ಆ ಕಾರ್ಯ ಕೂಡ ನಿಮ್ಮ ಕಾಲದಲ್ಲಿ ಆಗಬೇಕು. ಮೀನಿನ ಧಕ್ಕೆ ಆದರೆ ಮೀನನ್ನು ಲಾಂಚ್‌ಗಳಲ್ಲಿ ತರಿಸಿ ಮೀನಿನ ದಡದಲ್ಲಿ ನಿಲ್ಲಿಸಿ ವಿಕ್ರಯಕ್ಕೆ ಕೊಡಲು ಬಹಳ ಅನುಕೂಲವಾಗುತ್ತದೆ. ಈ ವ್ಯವಸ್ಥೆ ಕುಂದಾಪುರದವರೆಗೆ ವ್ಯವಸ್ಥೆ ಆಗಬೇಕು. ಅದರಲ್ಲೂ ಮಂಗಳೂರು ಬಂದರು ಬಹಳ ದೊಡ್ಡ ಬಂದರು, ಬಹಳ ಮೀನುಗಳು ಬಂದು ಬೀಳುವಂತಹ. ಸ್ಥಳ ೧೦–೨೦–೫೦–೧೦೦ ಬೋಟುಗಳಿಂದಲೂ ಟ್ರಾಲರ್ಸ್‌ಗಳಿಂದಲೂ ಬರುವಂತಹ ಮೀನುಗಳನ್ನು ರಾಶಿಹಾಕಲು ಒಂದು ಧಕ್ಕೆ ಬೇಕು. ಅದು ಇನ್ನೂ ಆಗಲಿಲ್ಲ ಆ ಧಕ್ಕೆ ಆಗಬೇಕೆಂದು ಏನು ನಿಶ್ಚಯಮಾಡಿದ್ದಾರೆ, ಆ ಕಾರ್ಯಕ್ರಮ ಆಗಿಲ್ಲ, ಅದನ್ನು ಮಾಡಲಿಕ್ಕೆ ತಾವು ಮುಂದೆ ಬರಬೇಕೆಂದು ಹೇಳುತ್ತೇನೆ.

ಇನ್ನು ರೈತರ ಸಾಲ ಮನ್ನಾ ಮಾಡಬೇಕೆಂದು ಹೇಳಿದ ಹಾಗೆ ಸಮುದ್ರದಲ್ಲಿ ಮೀನು ಹಿಡಿಯುವವರು ಒಂದು ರೀತಿಯ ರೈತರೇ ಆಗಿದ್ದಾರೆ ಮೀನು ಸಸ್ಯಹಾರಿ ಎಷ್ಟು ಬೇಕಾದರೂ ಮೀನನ್ನು ತಿನ್ನಿ ಎಂದು ಹೇಳತಕ್ಕ ವೈದ್ಯರು ಇದ್ದಾರೆ. ಮೀನು ಹಿಡಿಯುವವರು ಬಡವರು. ಅವರು ತುಂಬಾ ಸಾಲ ಮಾಡಿಕೊಂಡಿದ್ದಾರೆ, ಇವತ್ತು ಅದನ್ನು ಪರಿಹಾರ ಮಾಡಲಿಕ್ಕೆ ಸಾಧ್ಯವಾಗದ ಪರಿಸ್ಥಿತಿಯಲ್ಲಿದ್ದಾರೆ. ರೈತರ ಸಾಲ ಮನ್ನಾ ಮಾಡುವಾಗ ಉತ್ತರ ಕನ್ನಡ, ದಕ್ಷಿಣ ಕನ್ನಡದ ಎಲ್ಲಾ ಕರಾವಳಿಯಲ್ಲಿರತಕ್ಕ ಮೀನುಗಾರರಿಗೆ ಈ ವ್ಯವಸ್ಥೆ ಬರುವಂತೆ ಮಾನ್ಯ ಮಂತ್ರಿಗಳು ನೋಡಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅದು ಅಲ್ಲದೆ ಅವರಿಗೆ ಮನೆ ಇಲ್ಲ, ಈಗಿನ ಮಂತ್ರಿಗಳು ಅವರೆಲ್ಲರಿಗೂ ಮನೆಗಳನ್ನು ಕಟ್ಟಿ ಕೊಡುವ ವ್ಯವಸ್ಥೆಯನ್ನು ಮಾಡುತ್ತೇವೆಂದು ಹೇಳಿದ್ದಾರೆ. ಅದಕ್ಕಾಗಿ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಬಡಮೀನುಗಾರರು ಬರೇ ಒಂದು ಚಿಕ್ಕ ಚಪ್ಪರಹಾಕಿಕೊಂಡು ಜೀವನ ಮಾಡತಕ್ಕ ಜನ. ಆದ್ದರಿಂದ ಅವರಿಗೆ ಮನೆ ಕಟ್ಟಿಕೊಡುವಂತಹ ವ್ಯವಸ್ಥೆ ಕೂಡ ಈ ಸರ್ಕಾರ ಮಾಡಬೇಕು, ಕರಾವಳಿಯಲ್ಲಿರತಕ್ಕ ಎಲ್ಲಾ ಮೀನುಗಾರರಿಗೂ ಮನೆಗಳನ್ನು ಕಟ್ಟಿಸಿಕೊಡುವ ಕೆಲಸವನ್ನು ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಉಲ್ಲಾಳದಲ್ಲಿ ಮೀನುಗಾರರಿಗೆ ೪ ವರ್ಷಗಳಿಂದ ಕಡಲಿನ ಕೊರತೆ ಎಡೆಬಿಡದೆ ಆಗುತ್ತಿರುವುದರಿಂದ ಅವರು ಮನೆ ಮಾರು ಹೋಗುವಂತಹ ಪರಿಸ್ಥಿತಿ ಉಂಟಾಗಿದೆ. ಆದ್ದರಿಂದ ಈ ಕಡಲ ಕೊರತೆ ಆಗದಹಾಗೆ ಶಾಶ್ವತವಾಗಿ ತಡೆಗೋಡೆಯನ್ನು ಕಟ್ಟಿಕೊಡುತ್ತೇವೆಂದು ಸರ್ಕಾರದವರು ಕಳೆದ ೪–೫ ವರ್ಷಗಳಿಂದ ಹೇಳುತ್ತಿದ್ದಾರೆ. ಈ ತಡೆಗೋಡೆಯನ್ನು ಈ ವರ್ಷವಾದರೂ ಕಟ್ಟಿಕೊಟ್ಟು ಉಲ್ಲಾಳದ ಆ ಮೀನುಗಾರರಿಗೆ ಉಪಯೋಗವಾಗುವ ಹಾಗೆ ಮಂತ್ರಿಗಳು ಮಾಡಬೇಕೆಂದು ಅಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತೇನೆ. ಇನ್ನು ಸಾಲ ಮನ್ನಾ ಮಾಡುವ ವಿಚಾರದ ಬಗ್ಗೆ ಹೇಳಬೇಕಾದರೆ ಬೆಂಗರೆಯಲ್ಲಿರುವ ಜನರಿಗೆ ಯಾವುದೇ ರೀತಿಯ ವ್ಯವಸ್ಥೆ ಇಲ್ಲ. ಮೀನುಗಾರರ ಕಷ್ಟವನ್ನು ವಿವರಣೆಯಲ್ಲಿ ಹೇಳುವುದಾದರೆ "ಮನೆನೆನಪು ಇಲ್ಲದೆ, ಹೆಂಡತಿನೆನಪು ಇಲ್ಲದೆ, ಬೇಕಾದವರ ನೆನಪಿಲ್ಲದೆ, ಕುಟುಂಬದವರ ನೆನಪಿಲ್ಲದೆ, ನಾವು ಸಮುದ್ರಕ್ಕೆ ಹೋದರೆ ರಾತ್ರಿ, ಹಗಲು, ಚಳಿ, ಬಿಸಿಲೆನ್ನದೆ ೩೬ ಗಂಟೆಗಳ ಕಾಲ ಕೂಡ ನಾವು ಬೆವರು, ಚಳಿಯನ್ನು ನೆನೆಸದೆ ಕೆಲಸ ಮಾಡತಕ್ಕ ಜನರಾದ ನಮ್ಮ

ನಾವು ಹೇಗೆ ಆಗುತ್ತದೆಂದು ಹೇಳಲಿಕ್ಕೆ ಸಾಧ್ಯವಿಲ್ಲ.' ಅದೇ ರೀತಿ ಕವಿವಾಣಿಯಲ್ಲಿ ಮೀನುಗಾರರು ಹೇಳತಕ್ಕ ಮಾತನ್ನು ಈ ರೀತಿಯಲ್ಲಿ ಹೇಳಬಹುದು.

"ಮೇಲೆ ನೋಡೆ ನೀಲಿ ಗಗನ
ಕೆಳಗೆ ನೋಡೆ ತೆರೆಯ ನೀರು
ಅಯ್ಯೊ ದಿಕ್ಕು ಕಾಣೆವು
ದಡದಲಿರುವ ನಿಮಗೆ ಮಾತ್ರ

ಇದರ ಅರ್ಥವಾಗದು'' ಎಂದು ಹೇಳುತ್ತಾ ರಾತ್ರಿ ಹಗಲು ಎನ್ನದೆ ಈ ಕಡಲಿನ ತೆರೆಗಳಲ್ಲಿ ಬಿದ್ದು ಒದ್ದಾಡುವ ಆ ಮೀನುಗಾರರು ಹೇಳತಕ್ಕ ಮಾತನ್ನು ಕವಿವಾಣಿಯಲ್ಲಿ ಹೇಳಿದ್ದಾರೆ ಅದೇ ಮೀನುಗಾರರ ಬಗ್ಗೆ ಕವಿವಾಣಿಯಲ್ಲಿ ನಾವು ಸಾಮಾನ್ಯ ಜನರಲ್ಲಿ, ಈ ದೇಶವನ್ನು ಉಳಿಸತಕ್ಕ ಶಕ್ತಿಯನ್ನು ಹೊಂದಿದ್ದೇವೆಂದು ಹೇಳುತ್ತಾರೆ.

"ನಾವು ಶೂರರು, ನಾವು ವೀರರು
ನಾವು ಮೀನುಗಾರರು.
ಹಗಲು ಇರುಳು ಬೆವರು ಸುರಿಸಿ
ದುಡಿಯುವಂಥ ಧೀರರು''
"ಬಿಸಿಲು ಮಳೆಗೆ, ರಾತ್ರಿ ಹಗಲು
ಕಡಲಿನಲ್ಲಿ ಗೇಯುತಿರುವೆವು
ನಮ್ಮ ಬಗ್ಗೆ ಕರುಣೆಯಿಲ್ಲ
ಮೀನ ಹಿಡಿವ ನಾವು ಬಡವರು

ನಾವು ಶೂರರು, ನಾವು ವೀರರು, ನಾವು ಮೀನುಗಾರರು'' ಎಂದು ಕವಿವಾಣಿಯಲ್ಲಿ ಮೀನುಗಾರರ ಬಗ್ಗೆ ಇಷ್ಟೊಂದು ಕಳಕಳಿಯಿಂದ ಹೇಳಿರುವಾಗ ಅವರ ಬಗ್ಗೆ ನಮ್ಮ ಚಿಂತನೆ ಎಷ್ಟು ದೊಡ್ಡದಾಗಿರಬೇಕು. ಅವರು ಸಾಮಾನ್ಯ ಜನರಲ್ಲ, ಇವೊತ್ತು ನಮ್ಮ ಕರಾವಳಿಯಲ್ಲಿ ½ ಅಂಶದಷ್ಟು ಆಹಾರ ಮೀನಿನಿಂದಲೇ ಜನರಿಗೆ ಹೋಗುತ್ತಿದೆ.

ಬಡ ಜನರು ತಮ್ಮ ಆಹಾರದಲ್ಲಿ ಅರ್ಧದಷ್ಟು ಮೀನನ್ನು ಬಳಸುತ್ತಾರೆ. ಒಳ್ಳೆಯ ಮೀನನ್ನು ತಿಂದರೆ ಅನ್ನ ರೊಟ್ಟಿ, ಚಪಾತಿಯನ್ನು ಬಹಳ ಕಡಿಮೆ ಬಳಸಬಹುದು, ಇಂತಹ ಮೀನುಗಾರರು ೩೫–೪೫ ಕೋಟಿ ರೂಪಾಯಿಯನ್ನು ಸರಕಾರಕ್ಕೆ ಒದಗಿಸಿಕೊಡುತ್ತಾರೆ ಇಂತಹವರಿಗೆ ಈಗಿನ ಮಂತ್ರಿಗಳು ಅನುಕೂಲವನ್ನು ಮಾಡಿಕೊಡುತ್ತಾರೆ. ನಾನು ಆಗಾಗ ಮಂಗಳೂರು, ಉಡುಪಿ ಕುಂದಾಪುರದ ಕಡೆಗೆ ಬರುತ್ತೇನೆ ಎಲ್ಲಾ ಸಮಸ್ಯೆಗಳನ್ನು ನೋಡುತ್ತೇನೆ ಮೀನುಗಾರರಿಗೆ ಒಂದಲ್ಲಾ ಒಂದು ರೀತಿಯಲ್ಲಿ ರಕ್ಷಣೆಯನ್ನು ಕೊಡುತ್ತೇನೆಂದು ಹೇಳುತ್ತಿದ್ದಾರೆ. ಅದು ಒಳ್ಳೆಯ ಮಾತು. ಹಿಂದಿನ ವರ್ಷಗಳಲ್ಲಿ ಬರೀ ಮಾತಿನಲ್ಲಿಯೇ ಮಾಡುತ್ತೇವೆಂದು ಹೇಳಿಕೊಂಡು ಬಂದಿದ್ದಾರೆ ಮಾನ್ಯ ನರಸಿಂಹಮೂರ್ತಿಯವರು ಹೇಳಿದ್ದನ್ನು ಮಾಡಿ ತೋರಿಸುತ್ತಾರೆಂದು ನಾನು ನಂಬಿಕೊಂಡಿದ್ದೇನೆ. ಇನ್ನು ೬ ತಿಂಗಳು ಇಲ್ಲವೇ ಒಂದು ವರ್ಷದಲ್ಲಿ ಅದರ ಬಗ್ಗೆ ಪ್ರತಿಫಲವನ್ನು ನಾವು ಕಾಣುತ್ತೇವೆಂದು ನಾನು ತಿಳಿದುಕೊಂಡಿದ್ದೇನೆ. ಇಲ್ಲದಿದ್ದರೆ ಈಗ ಹೇಳಿದ್ದನ್ನೇ ಮತ್ತೊಮ್ಮೆ ಹೇಳತಕ್ಕಂತಹ ಪರಿಸ್ಥಿತಿ ಬರುತ್ತದೆ. ಆದರೆ ಆ ಪರಿಸ್ಥಿತಿ ಬರುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಮಂಗಳೂರಿನಲ್ಲಿ ರತಕ್ಕಂತಹವರ ಪೈಕಿ ಅರ್ಧದಷ್ಟು ಜನ ನಗರಕ್ಕೆ ಸೇರುತ್ತಾರೆ. ಆದ್ದರಿಂದ ನಗರಾಭಿವೃದ್ಧಿ ಬಗ್ಗೆ ನಾನು ಕೆಲವು ಮಾತನ್ನು ಹೇಳಬೇಕೆಂದು ಇದ್ದೆ. ಆದರೆ ಸಮಯ ಇಲ್ಲದೇ ಇರುವುದರಿಂದ ನನ್ನ ಮಾತನ್ನು ಇಲ್ಲಿಗೇ ಮುಗಿಸುತ್ತೇನೆ. ಇಷ್ಟು ಹೇಳಲು ಅವಕಾಶ ಕೊಟ್ಟದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ).—ಮಾನ್ಯ ಅಧ್ಯಕ್ಷರೇ, ನಗರಾಭಿವೃದ್ಧಿ ಇಲಾಖೆಯ ಬೇಡಿಕೆ ಬಗ್ಗೆ ನನ್ನ ಬೆಂಬಲವನ್ನು ಸೂಚಿಸಿ ಸರ್ಕಾರಕ್ಕೆ ಕೆಲವು ಸೂಚನೆಗಳನ್ನು ಕೊಡಲು ಬಯಸುತ್ತೇನೆ. ನಮ್ಮ ಪುರಸಭೆಗಳು ಮತ್ತು ನಗರಸಭೆಗಳು ಯಾವ ಮಟ್ಟದಲ್ಲಿವೆ ಎಂಬ ಬಗ್ಗೆ ನನ್ನ ಅನೇಕ ಸ್ನೇಹಿತರು ಅವರದ್ದೇ ಆದಂತಹ ಧಾಟಿಯಲ್ಲಿ ಕೆಲವು ಮಾತುಗಳನ್ನು ಹೇಳಿದ್ದಾರೆ. ೧೨೬ ಪುರಸಭೆಗಳು, ೬ ನಗರ ಪಾಲಿಕೆಗಳು ಇರತಕ್ಕಂತಹ ಈ ರಾಜ್ಯದಲ್ಲಿ ೮೧ರ ಸೆನ್ಸಸ್ ಪ್ರಕಾರ ೨೯ ಪರ್ಸೆಂಟ್ ಜನರು ಈ ನಗರಗಳಲ್ಲಿ ವಾಸ ಮಾಡುತ್ತಿದ್ದಾರೆಂದರೆ ತಪ್ಪಾಗಲಾರದು. ಮೂರು ಕೋಟಿ ೫೬ ಲಕ್ಷದಷ್ಟು ಜನರು ಈ ರಾಜ್ಯದಲ್ಲಿ ವಾಸ ಮಾಡುತ್ತಿದ್ದಾರೆ. ಈ ದೇಶದ ನಗರಗಳು ತೀವ್ರವಾಗಿ ಇಂದು ಬೆಳೆಯುತ್ತಿವೆ. ಇಡೀ ದೇಶದಲ್ಲಿ ಜನಸಂಖ್ಯೆ ಬೆಳೆಯುವ ದಿಶೆಯಲ್ಲಿ

ನೋಡಿದಾಗ ನಮ್ಮ ಕರ್ನಾಟಕ ರಾಜ್ಯ ೪ನೇ ಸ್ಥಾನದಲ್ಲಿ ಇದೆ. ನಗರ ವಾಸಿಗಳು ಬೆಳೆಯುತ್ತಕ್ಕಂತಹ ದಿಶೆಯಲ್ಲಿ ಕೂಡ ನಮ್ಮ ರಾಜ್ಯ ೪ನೇ ಸ್ಥಾನದಲ್ಲಿರುವುದನ್ನು ನಾವು ಮನಗಾಣುತ್ತಿದ್ದೇವೆ. ನಮ್ಮದು ೧೩೬ ಪುರಸಭೆಗಳು ೨೦ ನಗರ ಸಭೆಗಳು ೬ ನಗರಪಾಲಿಕೆಗಳು ೧೪ ಅಧಿಸೂಚಿತ ಪ್ರದೇಶಗಳು ಇರತಕ್ಕಂತಹ ರಾಜ್ಯವಾಗಿದೆ. ೫೦,೦೦೦ ಜನಸಂಖ್ಯೆ ಇದ್ದರೆ ಅದನ್ನು ನಗರಸಭೆ ಎಂದು ಈ ಸರಕಾರ ತೀರ್ಮಾನ ಮಾಡಿದೆ. ೧೦ ಸಾವಿರದಿಂದ ೫೦ ಸಾವಿರದವರೆಗೆ ಜನಸಂಖ್ಯೆ ಇದ್ದರೆ ಪುರಸಭೆ ಎಂದು ಸರ್ಕಾರ ತೀರ್ಮಾನ ಮಾಡಿದೆ. ಈ ಹಿಂದಿನ ಸರ್ಕಾರದವರು ಅವುಗಳಿಗೆ ಸಾಕಷ್ಟು ಹಣವನ್ನು ಕೊಡದೆ ರಾಜಕೀಯ ಮಾಡಿಕೊಂಡು ಬಂದ ಕಾರಣದಿಂದ ಅಲ್ಲಿನ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿದೆ. ಈ ಹಿಂದಿನ ಸರಕಾರ ಇದರ ಬಗ್ಗೆ ರಾಜಕೀಯ ಮಾಡಿಕೊಂಡು ಬಂದಿದ್ದರಿಂದ ಈ ರೀತಿಯಾಗಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲವೆಂದು ನಾನು ಭಾವಿಸಿದ್ದೇನೆ. ನಮ್ಮ ನಾಗಮಂಗಲದಲ್ಲಿ ೧೮ ಸಾವಿರ ಜನಸಂಖ್ಯೆಯಿದ್ದರೂ ಹತ್ತು ಸಾವಿರಕ್ಕಿಂತ ಹೆಚ್ಚು ಇರತಕ್ಕಂತಹ ಪ್ರದೇಶವನ್ನು ಪುರಸಭೆ ಎಂದು ಡಿಕ್ಲೇರ್ ಮಾಡಬೇಕಾಗಿತ್ತು. ಆದರೆ ಅದಕ್ಕೆ ರಾಜಕೀಯವನ್ನು ಬೆರೆಸಿ ಅದನ್ನು ಇಂಟ್ರೀಮ್ ಮಂಡಲವೆಂದು ತೀರ್ಮಾನ ಮಾಡಿದರು. ಈಗ ಅದು ಜಿಲ್ಲಾಪರಿಷತ್ತಿನ ವ್ಯಾಪ್ತಿಗೆ ಬರುತ್ತದೆ. ನಾಗಮಂಗಲ ತಾಲ್ಲೂಕಿನಲ್ಲಿ ೧೮ ಸಾವಿರ ಜನಸಂಖ್ಯೆ ಇವತ್ತು ಇದೆ. ಅದರೂ ಕೂಡ ಅದನ್ನು ಇಂಟ್ರೀಮ್ ಮಂಡಲವೆಂದು ಮಾಡಿದ್ದಾರೆ. ಅಂತಹ ಮಂಡಲಗಳ ಪರಿಸ್ಥಿತಿ ಶೋಚನೀಯವಾಗಿದೆ. ಪುರಸಭೆ ಮತ್ತು ನಗರಸಭೆಗಳ ಪರಿಸ್ಥಿತಿ ಕೂಡ ಬಹಳ ಶೋಚನೀಯವಾಗಿದೆ. ಇಂಟ್ರೀಮ್ ಮಂಡಗಳಿಗೆ ಜಿಲ್ಲಾ ಪರಿಷತ್ತು ಹಣವನ್ನು ಕೊಡಬೇಕಾಗುತ್ತದೆ. ಅವರನ್ನು ಕೇಳಿದರೆ ನಮ್ಮಲ್ಲಿ ಹಣ ಇಲ್ಲವೆಂದು ಹೇಳುತ್ತಾರೆ. ಇದರಿಂದಾಗಿ ನಾಗಮಂಗಲದಲ್ಲಿ ಕುಡಿಯುವ ನೀರಿನ ತೊಂದರೆ ಬಹಳ ವಾಗಿದೆ. ಅದೇ ಒಂದು ಹಳ್ಳಿಯಲ್ಲಿರತಕ್ಕಂತಹ ಕುಡಿಯುವ ನೀರಿನ ಸೌಲಭ್ಯ ನಮ್ಮ ನಾಗಮಂಗಲ ಪಟ್ಟಣದಲ್ಲಿ ಇಲ್ಲ, ಇವತ್ತು ಪ್ರತಿ ಮನೆಗಳ ಮುಂದೆ ಗುಂಡಿಗಳಿವೆ. ಅಲ್ಲಿಗೆ ಹೋಗತಕ್ಕಂತಹ ಜನರು ಮೂಗು ಮುಚ್ಚಿಕೊಂಡು ಹೋಗಬೇಕಾಗುತ್ತದೆ. ಮತ್ತು ಅಲ್ಲಿಂದ ಬರತಕ್ಕಂತಹ ನೀರನ್ನು ಕುಡಿದರೆ ಜನರು ಖಾಯಿಲೆಯಿಂದ ನರಳತಕ್ಕಂತಹ ಪರಿಸ್ಥಿತಿ ಇದೆ, ಜಿಲ್ಲಾ ಪರಿಷತ್ತಿಗೆ ಹೇಳಿದರೆ ಅವರು ನಮ್ಮಲ್ಲಿ ಹಣವಿಲ್ಲವೆಂದು ಹೇಳುತ್ತಾರೆ. ಸರಕಾರಕ್ಕೆ ಹೇಳಿದರೆ ಅದು ಜಿಲ್ಲಾಪರಿಷತ್ತಿಗೆ ಸೇರಿದೆ ಎಂದು ಹೇಳುತ್ತಾರೆ. ೧೦ ಸಾವಿರಕ್ಕಿಂತ ಮೇಲ್ಪಟ್ಟು ಜನಸಂಖ್ಯೆ ಇದ್ದರೆ ಅದನ್ನು ಪುರಸಭೆ ಎಂದು ಘೋಷಣೆ ಮಾಡಬೇಕು, ಹೊಸ ಜನಗಣತಿಯ ಪ್ರಕಾರ ನಾಗಮಂಗಲವನ್ನೂ ಕೂಡ ಪುರಸಭೆ ಎಂದು ಘೋಷಣೆ ಮಾಡಿ ರಾಜ್ಯ ಸರಕಾರ ಇಲ್ಲಿಗೆ ನೇರವಾದಂತಹ ಧನ ಸಹಾಯ ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ.

೧೯೮೯-೯೦ನೇ ಸಾಲಿನಲ್ಲಿ ಸುಮಾರು ೨೮ ಕೋಟಿ ರೂಪಾಯಿಗಳವರೆಗೆ ಮನೆಗಂದಾಯದ ಬಾಕಿ ಮತ್ತು ಇತರೇ ಬಾಕಿ ಪುರಸಭೆಗಳಿಗೆ ಮತ್ತು ನಗರಸಭೆಗಳಿಗೆ ಬರಬೇಕಾಗಿದೆ. ಇವತ್ತು ನನಗನಿಸುತ್ತದೆ, ಸುಮಾರು ೯ ಕೋಟಿ ರೂಪಾಯಿಗಳವರೆಗೆ ಮನೆಗಂದಾಯ ಬಾಕಿ ಉಳಿದಿದೆ. ಮನೆಗಂದಾಯವನ್ನು ವಸೂಲ್ಮಾಡತಕ್ಕ ಅಧಿಕಾರ ಇಲ್ಲವೆ? ಎಲ್ಲ ಪುರಸಭೆ ಮತ್ತು ನಗರಸಭೆಗಳಲ್ಲಿ ನಾವು ಅಧಿಕಾರಿಗಳಿಗೆ ಸಂಬಳವನ್ನು ಕೊಡುತ್ತಿದ್ದೇವೆ, ಇಷ್ಟಾದರೂ ಕೂಡ ಅಲ್ಲಿ ಎಷ್ಟರ ಮಟ್ಟಿಗೆ ಅಧಿಕಾರ ನಡೆಯುತ್ತಿದೆ ಎಂದರೆ ಒಂದು ಕಡೆ ಸರಿಯಾಗಿ ಕೆಲಸವನ್ನು ಮಾಡುತ್ತಿಲ್ಲ, ರಸ್ತೆಗಳೆಲ್ಲಾ ಗುಂಡಿ ಬಿದ್ದಿವೆ, ಕುಡಿಯುವುದಕ್ಕೆ ಸರಿಯಾಗಿ ನೀರಿಲ್ಲ ಎಂದು ಹೇಳತಕ್ಕದ್ದು ಒಂದು ಕಡೆಯಾದರೆ ಪುರಸಭೆ ಮತ್ತು ನಗರ ಸಭೆಗಳಿಗೆ ಬರಬೇಕಾದ ದುಡ್ಡನ್ನು ವಸೂಲ್ಮಾಡತಕ್ಕ ಕೆಲಸ ಕೂಡ ಬಹಳ ಮಂದಗತಿಯಲ್ಲಿ ನಡೆಯುತ್ತಿದೆ, ಈಗ ೯ ಕೋಟಿ ರೂಪಾಯಿ ಬಾಕಿ ಉಳಿದಿದೆ. ಮೊದಲು ಈ ಬಾಕಿಯನ್ನು ವಸೂಲ್ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ.

ಮಾನ್ಯ ಅಧ್ಯಕ್ಷರೆ, ಇವತ್ತು ಬೆಳಿಗ್ಗೆ ಮಾನ್ಯ ಸದಸ್ಯರಾದ ಪಾಟೀಲ್‌ನಾಗರಾಜ್‌ರವರು ಹೇಳು ತ್ತಿದ್ದರು, ಏನೆಂದರೆ, ಪುರಸಭೆ ಮತ್ತು ನಗರಸಭೆಗಳಲ್ಲಿ ಜಾಡಮಾಲಿಗಳು ಕಸ ಗುಡಿಸಲು ಉಪಯೋಗಿಸುವ ಪೊರಕೆಗಳು ಕಿತ್ತುಹೋಗಿವೆ, ಅವರಿಗೆ ಹೊಸ ಪೊರಕೆಗಳನು ಕೊಡಿಸಲು ಹಣ ಇಲ್ಲ ಎಂದು, ಜಾಡಮಾಲಿ ಗಳಿಗೆ ನಾವು ಸಂಬಳವನ್ನು ಕೊಡುವುದಕ್ಕೂ ಕೂಡ ಅನೇಕ ಪುರಸಭೆಗಳಲ್ಲಿ ಹಣವೇ ಇಲ್ಲ. ಉದಾಹರಣೆಗೆ ಹೇಳುವುದಾದರೆ ಅನೇಕ ಪುರಸಭೆಗಳಲ್ಲಿ ಜಾಡಮಾಲಿಗಳು ಹೇಳಿಕೊಳ್ಳುವುದನ್ನು ನಾವು ಕೇಳಿದ್ದೇವೆ, ಏನೆಂದರೆ, "ನಾವು ಈ ಪುರಸಭೆಯಲ್ಲೇ ಇದ್ದರೆ ನಮ್ಮ ಜೀವನವನ್ನೂ ಕೂಡ ನಡೆಸಿಕೊಂಡು ಹೋಗು ವುದಕ್ಕಾಗುವುದಿಲ್ಲ" ಎಂದು ಹೇಳಿಕೊಂಡು ತಮ್ಮ ಕೆಲಸವನ್ನೇ ಬಿಟ್ಟು ಹೋಗುವುದಕ್ಕೆ ಅವರು ಸಿದ್ಧವಾಗಿದ್ದಾರೆ. ಆ ಮಟ್ಟಕ್ಕೆ ಇವತ್ತು ಪುರಸಭೆಗಳ ಪರಿಸ್ಥಿತಿ ಬಂದಿದೆ. ೧೯೭೬ನೇ ಇಸವಿಯಲ್ಲಿ ಮಾನ್ಯ ದೇವರಾಜ ಅರಸ್‌ರವರು ಮುಖ್ಯ ಮಂತ್ರಿಗಳಾಗಿದ್ದಾಗ ಈ ಆಕ್ಟ್ರಾಯ್ ರದ್ದುಮಾಡಿ ಈ ಬಾಬಿ ನಿಂದ ನಗರಸಭೆ ಮತ್ತು ಪುರಸಭೆಗಳಿಗೆ ಬರಬೇಕಾಗಿದ್ದ ಹಣವನ್ನು ಅನುದಾನದ ರೂಪದಲ್ಲಿ ಸರ್ಕಾರದಿಂದ

ಕೊಡತಕ್ಕ ವ್ಯವಸ್ಥೆಯನ್ನು ಮಾಡಿದರು. ಕಳೆದ ವರ್ಷ ೫೯ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ, ಇದರ ಜೊತೆಗೆ ಇನ್ನೂ ೧೦ ಕೋಟಿ ರೂಪಾಯಿಗಳನ್ನು ವಿಶೇಷ ಧನಸಹಾಯವನ್ನಾಗಿ ಕೊಟ್ಟಿದ್ದಾರೆ. ಇಷ್ಟಾದರೂ ಕೂಡ ಯಾವುದೇ ಪುರಸಭೆ, ನಗರಸಭೆಗಳಲ್ಲಿಯೂ ಕೂಡ ವ್ಯವಸ್ಥಿತವಾದ ಅಭಿವೃದ್ಧಿ ಕಾರ್ಯಗಳು ಆಗುತ್ತಿಲ್ಲ. ಆದ್ದರಿಂದ ನಾನು ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯ ಮಾಡಿ ಹೇಳುವುದೇನೆಂದರೆ, ಪುರಸಭೆ ಮತ್ತು ನಗರಸಭೆಗಳಿಗೆ ಆದಾಯ ಬರಬೇಕಾದರೆ, ಅಲ್ಲಿಯ ಕೆಲಸ ಕಾರ್ಯಗಳು ಸುಸೂತ್ರವಾಗಿ ನಡೆಯಬೇಕಾದರೆ ಮತ್ತೇ ಈ ಆಕ್ಟ್ರಾಯ್ ಪದ್ಧತಿಯನ್ನು ಜಾರಿಗೆ ತರಬೇಕು. ಆಕ್ಟ್ರಾಯ್ ಜಾರಿಗೆ ತಂದರೆ ಮಾತ್ರ ಈ ಪುರಸಭೆ, ನಗರಸಭೆಗಳ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಸ್ಥಳೀಯ ಸಂಸ್ಥೆಗಳು ಆರ್ಥಿಕವಾಗಿ, ಸುವ್ಯವಸ್ಥಿತವಾಗಿ ಇರಬೇಕು, ಕಳೆದ ವರ್ಷ ಹುಬ್ಬಳ್ಳಿಯಲ್ಲಿ ನಡೆದಂಥ ಮುನಿಸಿಪಲ್ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಸಮ್ಮೇಳನದಲ್ಲಿ ಒಕ್ಕೊರಲಿನಿಂದ ಒಂದು ರೆಸಲ್ಯೂಷನ್‌ನ್ನು ಪಾಸ್ ಮಾಡಿ ದಯವಿಟ್ಟು ಆಕ್ಟ್ರಾಯ್‌ನನ್ನು ಪುನ: ಜಾರಿಗೆ ತರಬೇಕು, ಪುರಸಭೆಗಳ, ನಗರಸಭೆಗಳ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗಬೇಕಾದರೆ ಇದನ್ನು ಮಾಡಲೇಬೇಕೆಂದು ಸರ್ಕಾರವನ್ನು ಒತ್ತಾಯ ಮಾಡಿದರು. ಆದರೆ ಇದುವರೆಗೂ ಈ ವಿಚಾರದಲ್ಲಿ ಯಾವುದೇ ತೀರ್ಮಾನವೂ ಆಗಿಲ್ಲ. ಇವತ್ತು ಪುರಸಭೆಗಳ ಆರ್ಥಿಕಪರಿಸ್ಥಿತಿ ತುಂಬಾ ಕೆಟ್ಟುಹೋಗಿದೆ. ಪೌರ ಕಾರ್ಮಿಕರಿಗೆ ಸಂಬಳವನ್ನು ಕೊಡುವುದಕ್ಕೆ ಹಣ ಇಲ್ಲದಿರುವಾಗ ಅಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳೂ ಆಗುವುದಿಲ್ಲವೆಂದು ಹೇಳಬೇಕಾಗಿದೆ.

ಇನ್ನು ಬೆಂಗಳೂರಿನ ಬಗ್ಗೆ ಹೇಳುವುದಾದರೆ, ಬಿ.ಡಿ.ಎ. ಎಂದರೆ ಇದು ಒಂದು ಭ್ರಷ್ಟ ಚಕ್ರವರ್ತಿಗಳ ಒಂದು ಕೂಟ ಎನ್ನತಕ್ಕ ತೀರ್ಮಾನಕ್ಕೆ ಜನರು ಬಂದಿದ್ದಾರೆ. ಈ ಬಿ.ಡಿ.ಎ. ಬಗ್ಗೆ ನಾನು ಒಂದು ಪ್ರಶ್ನೆಯನ್ನು ಕೇಳಿ, ಬಿ.ಡಿ.ಎ. ನಲ್ಲಿ ಎಷ್ಟು ಸೈಟುಗಳಿವೆ, ಎಷ್ಟು ಜನರು ಸೈಟುಗಳಿಗಾಗಿ ಅರ್ಜಿಗಳನ್ನು ಹಾಕಿಕೊಂಡಿದ್ದಾರೆ, ನಿಮ್ಮ ಹತ್ತಿರ ಎಷ್ಟು ಸೈಟುಗಳಿವೆ ಎಂಬ ವಿವರಗಳನ್ನು ತಿಳಿಸಬೇಕೆಂದು ಕೇಳಿದ್ದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರ ಸಚಿವಾಲಯದಿಂದ ಬಂದ ಉತ್ತರ ಎಂದರೆ ೮೯ ಸಾವಿರ ಅರ್ಜಿಗಳು ಬಾಕಿ ಇವೆ, ೮೦೦ ಸೈಟುಗಳು ನಮ್ಮ ಹತ್ತಿರ ರೆಡಿಯಾಗಿವೆ ಎಂದು ಹೇಳಿದ್ದಾರೆ. ಆದ್ದರಿಂದ ನಾನು ತಮ್ಮ ಮೂಲಕ ಸರ್ಕಾರಕ್ಕೆ ಒಂದು ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇದರ ಬಗ್ಗೆ ಒಂದು ಶ್ವೇತಪತ್ರವನ್ನು ಸರ್ಕಾರದವರು ಹೊರಡಿಸಬೇಕೆಂದು ಒತ್ತಾಯ ಮಾಡುತ್ತೇನೆ. ಬಡ ಜನರು ಇವತ್ತು ಬಹಳ ಕಷ್ಟಪಟ್ಟು ೩೦ × ೪೦ ಅಳತೆಯ ಸೈಟಿಗೆ ೨೫೦ ರೂ. ಗಳನ್ನು, ೪೦ × ೬೦ ಅಳತೆಯ ಸೈಟಿಗೆ ೫೦೦ ರೂ. ಗಳನ್ನು, ೫೦ × ೮೦ ಅಳತೆಯ ಸೈಟಿಗೆ ೮೦೦ ರೂಪಾಯಿಗಳನ್ನು ಡಿಪಾಸಿಟ್ ಮಾಡಬೇಕಾಗಿದೆ. ಈ ಹಣ ವಾಪಸ್ಸು ಬರತಕ್ಕದ್ದಲ್ಲ. ಈ ರೀತಿ ತೆಗೆದುಕೊಳ್ಳತಕ್ಕ ಕೋಟ್ಯಾಂತರ ರೂಪಾಯಿ ಹಣಕ್ಕೆ ಬಡ್ಡಿ ಇಲ್ಲ. ಬಿ.ಡಿ.ಎ.ಗೆ ಯಾರೇ ಹೋದರೂ ಕೂಡ ಅಲ್ಲಿಯ ಅಧಿಕಾರಿಗಳಿಗೆ, ನೌಕರರಿಗೆ ದುಡ್ಡನ್ನು ಕೊಡದಿದ್ದರೆ ಅವರು ಯಾರೂ ಕೂಡ ಇವರನ್ನು ಮಾತನ್ನೇ ಆಡಿಸುವುದಿಲ್ಲ. ಆ ಮಟ್ಟದಲ್ಲಿ ಅಲ್ಲಿಯ ಅಧಿಕಾರಿಗಳು, ನೌಕರರು ಇದ್ದಾರೆ. ಮಾನ್ಯ ನರಸಿಂಹಮೂರ್ತಿಯವರು ಇದನ್ನು ಸರಿಪಡಿಸಬೇಕು, ಏಕೆಂದರೆ ಅವರಿಗೆ ಹೆಚ್ಚಿನ ಅನುಭವ ಇದೆ, ಅವರು ಹಿರಿಯರು, ಈ ವಿಚಾರದಲ್ಲಿ ಅವರು ಬಹಳ ದಿಟ್ಟ ನಿಲುವನ್ನು ತೆಗೆದುಕೊಳ್ಳುತ್ತಾರೆಂಬ ಆಶಯವನ್ನು ನಾನು ಇಟ್ಟುಕೊಂಡಿದ್ದೇನೆ. ಆದ್ದರಿಂದಲೇ ನಾನು ಮಾನ್ಯ ನರಸಿಂಹಮೂರ್ತಿಯವರಿಗೆ ಒತ್ತಾಯ ಪೂರ್ವಕವಾಗಿ ಹೇಳುತ್ತಿರುವುದು. ಬಿ.ಡಿ.ಎ.ನಲ್ಲಿ ಅಧಿಕಾರಿಗಳ ಸಮೂಹ ಎಷ್ಟರಮಟ್ಟಿಗೆ ಆಗಿದೆ ಎಂದರೆ ಇತ್ತೀಚಿನ ವರ್ಗಾವಣೆಯಲ್ಲಿ ನಾವು ನೋಡಿದ್ದೇವೆ. ಕೆಲವು ಅಧಿಕಾರಿಗಳು ಕಳೆದ ೨೦ ವರ್ಷಗಳಿಂದಲೂ ಕೂಡ ಈ ಬೆಂಗಳೂರನ್ನು ಬಿಟ್ಟೇ ಇಲ್ಲ. ಅವರಿಗೆ ಮಂತ್ರಿಗಿರಿ ಏನೂ ಬೇಡ. ಕೇವಲ ಇಂಜಿನಿಯರ್ ಆಗಿ ಬಿ.ಡಿ.ಎ.ನಲ್ಲಿದ್ದರೆ ಸಾಕು. ಅವರಿಗೆ ಎಲ್ಲ ಸೌಲಭ್ಯಗಳೂ ಸಿಕ್ಕುತ್ತವೆ. ಒಬ್ಬ ಇಂಜಿನಿಯರ್ ನನಗೆ ತಿಳಿದಿರುವಂತೆ ಕಳೆದ ೧೬ ವರ್ಷಗಳಿಂದ ಈ ಬೆಂಗಳೂರಿನಲ್ಲೇ ಇದ್ದುಕೊಂಡು ಇಂದಿರಾನಗರ, ಸದಾಶಿವನಗರ ಇನ್ನೂ ಮುಂತಾದ ಒಳ್ಳೊಳ್ಳೆಯ ಬಡಾವಣೆಗಳಲ್ಲಿ ಮನೆಗಳನ್ನು ನಿರ್ಮಾಣ ಮಾಡಿಕೊಂಡು ಬಹಳ ಆನಂದವಾಗಿದ್ದಾರೆ. ಅವರ ಬಗ್ಗೆ ಯಾರೂ ಚಿಂತನೆಯನ್ನು ಮಾಡಬೇಕಾಗಿಲ್ಲ. ಅವರೂ ಕೂಡ ಈ ದೇಶದ ಬಗ್ಗೆ ಚಿಂತೆ ಮಾಡುವುದಿಲ್ಲ.

ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಬಿ.ಡಿ.ಎ. ನಲ್ಲಿ ಮೂರು ವರ್ಷ ಇರುತ್ತಾರೆ ಮತ್ತೆ ಬೆಂಗಳೂರು ಸಿಟಿ ಕಾರ್ಪೊರೇಷನ್‌ಗೆ ಹೋಗುತ್ತಾರೆ. ಅಲ್ಲಿ ಮೂರು ವರ್ಷಗಳು ಇರುತ್ತಾರೆ, ಮತ್ತೆ ಅಲ್ಲಿಂದ ಅರ್ಬನ್ ವಾಟರ್ ಸಪ್ಲೆ ಡಿಪಾರ್ಟ್‌ಮೆಂಟ್‌ಗೆ ಹೋಗುತ್ತಾರೆ. ಇದೇ ರೀತಿಯಲ್ಲಿ ಕೆಲವಾರು ಹುದ್ದೆಗಳನ್ನು ಅವರು ಹಂಚಿಕೊಂಡುಬಿಟ್ಟಿದ್ದಾರೆ ಕೆಂಪೇಗೌಡ ನಮ್ಮ ಬೆಂಗಳೂರು ನಗರವನ್ನು ಕಟ್ಟಿದ ಬಗ್ಗೆ ಮಾನ್ಯ ವಾಟಾಳ್ ನಾಗರಾಜ್‌ರವರು ಅವರದೇ ಆದ ಭಾಷೆಯಲ್ಲಿ ಚೆನ್ನಾಗಿ ಹೇಳಿದರು. ನಾಲ್ಕು ಗೋಪುರಗಳನ್ನು ಕೆಂಪೇಗೌಡರು ನಾಲ್ಕು ದಿಕ್ಕಿನಲ್ಲಿ ಇಟ್ಟು ಊರನ್ನು ಕಟ್ಟಿದ್ದರು

ಏತಕ್ಕೆಂದರೆ ಕನ್ನಡನಾಡಿನ ಜನ ಬಂದು ನೆಲಸಲಿ ಎಂದು, ಕನ್ನಡನಾಡಿನ ಜನ ಬಾಳಿ ಬದುಕಲಿ ಎಂದು ನಾಲ್ಕುಕಡೆ ಗೋಪುರಗಳನ್ನು ಕಟ್ಟಿ ಹೋದರು. ಆದರೆ ನಮ್ಮ ಜನ ಸಿಂದಿಗಳಿಗೆ ಮತ್ತು ಸೇಟ್‌ಗಳಿಗೆ ಮಾರಿಕೊಂಡು ಬಿಟ್ಟರು ಎನ್ನತಕ್ಕಂಥ ಮಾತನ್ನು ಅವರು ಬಹಳ ಅಚ್ಚುಕಟ್ಟಾಗಿ ಅವರದೇ ಆದ ಭಾಷೆಯಲ್ಲಿ ಹೇಳಿದರು. ಈ ಮಾತನ್ನು ಒಪ್ಪತಕ್ಕಂಥಾದ್ದೇ ಆಗಿದೆ ಇವತ್ತು ಬೆಂಗಳೂರು ನಗರ ಬಹಳ ಬೃಹದಾಕಾರವಾಗಿ ಬೆಳೆಯುತ್ತಿರುವ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡಬೇಕಾಗಿದೆ, ಇವತ್ತು ಡೆಲ್ಲಿಯಲ್ಲಿ ಕುಳಿತಿರತಕ್ಕಂಥ ಜನರು ಬೆಂಗಳೂರಿಗೆ ಬಂದು ನೆಲೆಸಲು ಯೋಚನೆ ಮಾಡುತ್ತಿದ್ದಾರೆ. ಬಾಂಬೆಯಲ್ಲಿ ಇರತಕ್ಕಂಥ ಜನ ನೆಮ್ಮದಿ ಇಲ್ಲದೆ ಇಲ್ಲಿಗೆ ಬರುತ್ತಿದ್ದಾರೆ ಕಾಶ್ಮೀರದಲ್ಲಿರತಕ್ಕಂಥ ಜನರು ಬೆಂಗಳೂರಿಗೆ ಬಂದು ನೆಲೆಸಬೇಕೆಂದು ಇಚ್ಛೆಪಡುತ್ತಿದ್ದಾರೆ ಹೀಗಾಗಿ ರಾಜ್ಯದ ಜನಕ್ಕಿಂತ ವಲಸೆ ಬರತಕ್ಕಂಥ ಜನರು ಜಾಸ್ತಿಯಾಗಿದ್ದಾರೆ. ಆದ್ದರಿಂದ ಏನಾದರು ಮಾಡಿ ಸರ್ಕಾರ ಇದನ್ನು ತಡೆಗಟ್ಟಬೇಕು. ಇದನ್ನು ತಡೆಗಟ್ಟಿ ಕನ್ನಡ ನಾಡಿನ ಜನರಿಗೆ ಕನ್ನಡನಾಡಿನ ಮಕ್ಕಳಿಗೆ ಸೈಟು ಸಿಗುವಂಥ ವ್ಯವಸ್ಥೆಯನ್ನು ಮಾಡಬೇಕು. ಅವರಿಗೆ ಕೆಲಸ ಸಿಗುವಂತಹ ವ್ಯವಸ್ಥೆಯನ್ನು ಮಾಡಬೇಕು ಕನ್ನಡಿಗರೆಲ್ಲರೂ ಇಲ್ಲಿಯೇ ಕೆಲಸ ಮಾಡತಕ್ಕಂಥ ವ್ಯವಸ್ಥೆಯಾಗಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತೊಂದು ಮಾತನ್ನು ಹೇಳುವುದಾದರೆ, ಒಂದು ಕಡೆ ನೆಲಿಗಳ್ಳರು ಮತ್ತೊಂದು ಕಡೆ ಕಟ್ಟಡಗಳ್ಳರು ಇವರಿಬ್ಬರೂ ಸೇರಿಕೊಂಡು ಬೆಂಗಳೂರನ್ನು ಸಂಪೂರ್ಣವಾಗಿ ನಿರ್ನಾಮ ಮಾಡುತ್ತಿದ್ದಾರೆ. ಉದಾಹರಣೆಗೆ ತಮಗೆ ಗೊತ್ತಿರುವಹಾಗೆ ಕಳೆದ ೬-೭ ವರ್ಷಗಳ ಹಿಂದೆ ಗಂಗಾರಾಮ್ ಕಟ್ಟಡ ಬಿದ್ದು ಸುಮಾರು ನೂರು ಜನರ ಪ್ರಾಣವನ್ನು ತೆಗೆದುಕೊಂಡಿರತಕ್ಕಂಥದ್ದು ಇನ್ನೂ ಎಲ್ಲರ ಮನಸ್ಸಿನಲ್ಲಿ ಅಚ್ಚ ಹಸಿರಾಗಿದೆ ಆಗ ಸರ್ಕಾರ ಒಂದು ಘೋಷಣೆಯನ್ನು ಮಾಡಿತ್ತು. ಏನೆಂದರೆ ಇನ್ನು ಮುಂದೆ ಯಾವುದೇ ಗಗನ ಚುಂಬಿ ಕಟ್ಟಡಗಳನ್ನು ಕಟ್ಟಲು ನಾವು ಅವಕಾಶವನ್ನು ಕೊಡುವುದಿಲ್ಲವೆಂದು ಹೇಳಿದರು. ಆದರೆ ಸ್ವಾಮಿ, ಇತ್ತೀಚೆಗೆ ಎಷ್ಟು ಗಗನಚುಂಬಿ ಕಟ್ಟಡಗಳು ಎದ್ದಿವೆ ಎಂಬುದು ದೇವರಿಗೇ ಗೊತ್ತು.

ವಿದೇಶಗಳಿಗೆ ಹೋಗಬೇಡಿ ಎಂದು ನಮ್ಮ ಹಿಂದಿನ ಸರ್ಕಾರದ ಮಹಾತ್ಮರುಗಳನ್ನು ನಾವು ಕೇಳಿಕೊಂಡಿದ್ದೆವು. ಆದರೂ ಹೋದರು. ಅವರು ಸರ್ಕಾರದ ದುಡ್ಡಿನಲ್ಲಿ ವಿದೇಶಗಳಿಗೆ ಪ್ರವಾಸ ಹೋಗಿ ಅಲ್ಲಿಂದ ಅನುಭವ ಪಡೆದುಕೊಂಡು ಬಂದಿದ್ದರೆ ಚೆನ್ನಾಗಿತ್ತು. ಆದರೆ ಅವರು ಅಲ್ಲಿಂದ ಜನರನ್ನು ಎನ್. ಆರ್. ಐ. ಮಾಡುತ್ತೇವೆಂದು ಹೇಳಿ ಕರೆದುಕೊಂಡು ಬಂದುಬಿಟ್ಟರು, ಎಲ್ಲ ಜಮೀನನ್ನು ಅವರಿಗೇ ಕೊಟ್ಟರು. ನಮಗೇನು ತೊಂದರೆ ಇಲ್ಲ. ಸೈಟು ತೆಗೆದುಕೊಂಡು ಪೆಪ್ಸಿಕೋಲ ಮಾಡಿ, ಡಬ್ಬಲ್ ಕೋಲ ಮಾಡಿ ಇನ್ನೊಂದು ಮಾಡಿ ಎಂದು ಜಮೀನನ್ನು ಕೊಟ್ಟಿದ್ದೇ ಕೊಟ್ಟಿದ್ದು. ಗ್ರೀನ್ ಬೆಲ್ಟ್ ಏರಿಯಾದಲ್ಲಿ ಬರುವ ಜಮೀನು ಎಲ್ಲ ಸಂಪೂರ್ಣವಾಗಿ ಹೋಗಲಿ ಎಂದು ಹೇಳಿ ನಿರ್ನಾಮ ಮಾಡಿ ಬಿಟ್ಟರು. ಆದ್ದರಿಂದ ಈ ಸಂದರ್ಭದಲ್ಲಿ ದಿಟ್ಟಮಂತ್ರಿಗಳಾದ ತಮಗೆ ಒಂದು ಮಾತನ್ನು ಹೇಳಬೇಕಾಗಿದೆ. ಅವರ ಕಾರ್ಯಚಟುವಟಿಕೆಗಳನ್ನು ಅವರ ಆಫೀಸಿಗೆ ಹೋದಾಗ ನೋಡಿದೆ. ಅವರ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದನ್ನು ನೋಡಿದೆ. ಮಾನ್ಯ ನರಸಿಂಹಮೂರ್ತಿಯವರು ಅಧಿಕಾರಿಗಳನ್ನು ಇಷ್ಟು ಬೆದರಿಸುತ್ತಾರೆಂದು ನಾನು ತಿಳಿದುಕೊಂಡಿರಲಿಲ್ಲ. ಒಳ್ಳೆ ಚೆನ್ನಾಗಿ ಚಾವಟಿಯಲ್ಲಿ ಹೊಡೆದರು. ನನಗೆ ಅದೆಲ್ಲ ನಿನ್ನ ಪುರಾಣಬೇಕಾಗಿಲ್ಲ. ನಾನು ಎಚ್. ಯು.ಡಿ. ಮಿನಿಸ್ಟರಾಗಿ ೬ ತಿಂಗಳು ಆಯಿತು. ಏನೇನು ಕೆಲಸ ಮಾಡಿದ್ದೀರೆಂದು ನನ್ನನ್ನು ಶಾಸಕರು ಕೇಳುತ್ತಾರೆಂದು ಹೇಳಿದರು. ಆ ಒಂದು ಹುರುಪು ಕೊನೆಯವರೆಗೂ ಅವರಲ್ಲಿ ಇರಬೇಕು. ನಿಮ್ಮ ಕಾಲದಲ್ಲಿ ಹುಬ್ಬಳ್ಳಿ ನಗರಸಭೆ, ಬೆಂಗಳೂರು ನಗರಸಭೆ ಮತ್ತು ಮಂಡ್ಯ ನಗರಸಭೆ ಇದೆಲ್ಲವನ್ನು ಸರಿಪಡಿಸಬೇಕು. ರಾಜಕೀಯದ ಒಳನಾಡಿನಲ್ಲಿ ಏನೇನು ಹಿಂದಿನವರು ಕೆಡಿಸಿದ್ದರು, ಅದನ್ನೆಲ್ಲ ತಾವು ಸರಿಪಡಿಸಬೇಕು. ನಮ್ಮಂತವರ ಮಂಡಲಗಳು ಇವೆಯಲ್ಲ, ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಆಗಬೇಕು. ಒಳಚರಂಡಿ ಕೆಲಸಗಳು ಆಗಬೇಕು. ನಮ್ಮ ರಸ್ತೆಗಳು ಬಂಡಿಪುರದ ರಸ್ತೆಗಳಿಗಿಂತಲೂ ಕೆಟ್ಟಿವೆ. ನಮ್ಮ ಊರಲ್ಲಿ ಕುಡಿಯುವುದಕ್ಕೆ ನೀರಿನ ವ್ಯವಸ್ಥೆಯೂ ಇಲ್ಲ. ಒಳಚರಂಡಿಯ ವ್ಯವಸ್ಥೆ ಹೀಗೇ ಎಲ್ಲವೂ ಕೆಟ್ಟು ಹೋಗಿವೆ. ಆದ್ದರಿಂದ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ದಯವಿಟ್ಟು ನಿಮ್ಮ ಕಾಲದಲ್ಲಿಯಾದರೂ ಇದೆಲ್ಲವನ್ನು ಸರಿಪಡಿಸಿಕೊಡಬೇಕು. ಕೊನೆಯದಾಗಿ ನಾಗಮಂಗಲದಲ್ಲಿ ಕಳೆದ ಮೂರೂವರೆ ವರ್ಷಗಳಿಂದ ಏನು ಕೆಲಸವಾಗಿಲ್ಲ, ಮಾನ್ಯ ಹಣಕಾಸಿನ ಮಂತ್ರಿಗಳಾದ ರಾಜಶೇಖರ ಮೂರ್ತಿಯವರು ನಮ್ಮ ಊರಿಗೆ ಬಂದಾಗ ಅವರನ್ನು ಬೇಡಿಕೊಂಡೆ. ಅವರು ೭½ ಲಕ್ಷ ರೂಪಾಯಿಗಳನ್ನು ಕುಡಿಯುವ ನೀರಿಗಾಗಿ ಕೊಡುತ್ತೇವೆಂದು ಹೇಳಿದ್ದರು. ನಮ್ಮಲ್ಲಿ ಒಂದು ಮುಸಲ್ಮಾನರ ಕಾಲೋನಿ ಇದೆ. ಅವರು ನಾಗಮಂಗಲ ಟೌನ್‌ನಲ್ಲಿ ಸುಮಾರು ಒಂದೂವರೆ ಸಾವಿರ ಷೆಡ್‌ಗಳನ್ನು ಹಾಕಿಕೊಂಡಿದ್ದಾರೆ. ದಯವಿಟ್ಟು ನನಗೆ ಇನ್ನಷ್ಟು ಸಮಯವನ್ನು ಕೊಡಬೇಕು. ನಾನು ಇಲಾಖೆಯ ಬೇಡಿಕೆಯಮೇಲೆ ಮಾತನಾಡುತ್ತಿದ್ದೇನೆ. ನಾಗಮಂಗಲ ಟೌನ್‌ನಲ್ಲಿ ಒಂದು

ಸಾವಿರ ಗುಡಿಸಲುಗಳಿವೆ. ಅವೆಲ್ಲ ಸೋಗೆ ಗುಡಿಸಲುಗಳಾಗಿರುತ್ತವೆ. ಮಾನ್ಯಮಂತ್ರಿಗಳು ಅಲ್ಲಿಗೆ ಭೇಟಿಕೊಟ್ಟು ಹೌಸಿಂಗ್ ಬೋರ್ಡಿನಿಂದ ಅಥವಾ ಹುಡ್ಕೋ ಸ್ಕೀಮ್‌ನಿಂದ ಒಂದು ಸಾವಿರ ಮನೆಗಳನ್ನು ನಮ್ಮ ತಾಲ್ಲೂಕಿನಲ್ಲಿ ಕಟ್ಟಿಸಿಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಂಡು ನಮ್ಮ ಮಧ್ಯಂತರ ಮಂಡಲ್‌ಗಳಲ್ಲಿ ಏನು ವ್ಯತ್ಯಾಸ ಆಗಿದೆಯೋ ಅವುಗಳನ್ನು ತಮ್ಮ ಕಾಲದಲ್ಲಿ ಸರಿಪಡಿಸಬೇಕು ಎನ್ನುವ ಮಾತನ್ನು ಹೇಳಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪ್ರಭಾಕರ್ ರಾಣೆ (ಮಾನ್ಯ ಸದಸ್ಯರು ಗೈರು ಹಾಜರು).—

SRI BLASIUS M. D'SOUZA (Mangalore).—Mr, Speaker, Sir, we have very heavy Demands before us, viz., Fisheries' Ports, Housing and Urban Development, Compensation and Grants to the Corporations and Municipalities. I support all these demands. I am very happy that Mr Narasimha Murthy has taken keen interest both in Fisheries as well as in Urban Development. In his very first Press Conference, he said that everybody should eat fish and that there will be supply of fish at low cost. I thank him and I am quite sure he will fulfil is promise.

As the Hon'ble Member Sri Iddinabba rightly said, Fisheries has been neglected We have a coast of about 300 Kms and we have the economic zone of depth of 200 Miles which accounts for 50% o the land area of the Karnataka state. Inspite of that, the amount provided for Fisheries is very meagre, i.e., a sum of Rs. 8,76,68,000/- on Revenue Account and Rs 2,13,00,000/- on Capital Account. A very small amount has been kept inspite of earning Rs. 38 Crores every year from the exports done from the Coasts of South Canara and North Canara districts. It is a very sorry state of affairs.

We find that the bar at Mangalore has not been dredged from the last fifteen years, From the last six years, we have been crying in this House in this regard and we have been getting promises from the Government to dredge the bar and have the break waters. An estimate of Rs. 2,30 crores for the construction of break waters has already been sanctioned to start the work immediately. last year, about 10 Fisherman died in the bar due to the silting of the bar. This year, one person has died. I would therefore request the Hon'ble Minister to see that the works of break waters are started immediately. From so many years, we have failed in this duty. The people of Karnataka have given us a big mandate and they have hoped that this Government will definitely work. Unless the break waters are put, I am sure they would not be able to dredge the bar When the Olympics was held at Seoul, they dredged the rivers and had constructed nice hotels and other resorts for Tourists. Even the Mangalore has got a River bank. Unfortunately all the river banks have been occupied by Tile factories. There is not single bit of land for the people for thier recreations. I would request the Hon'ble Minister to use his good offices and to dredge the river We have about 18 places where there is ship landing in South Canara and North Canara. A Dredger was proposed to be acquired in the

Seventh Plan and the Government did not take sufficient steps to acquire the Dredger as well as to dredge the bar and the river. I am sure that the Hon'ble Minister will see that the Dredger is brought at the Mangalore bar and also the ship Landing at different sea-shores are dredged.

Further we have Ports and Water Transport Services, which is the cheapest service compared to the other Transport services. Few years back, the Government of Karnataka started Shipping Corporation where they acquired two ships for Cargo and they lost heavily. Mangalore always had Passenger Ship to Goa and Bombay, previously especially from Goa to Bombay. Unfortunately after the new Mangalore Port was constructed, and landing facilities are available for the passengers there is no Passenger ship from Mangalore to Bombay. Though there is heavy rush and the people are clamouring to go by Ship. No ship has been started therefore. I would request the Hon'ble Minister to start a Ship from Mangalore to Bombay and this help the people of D.K. District.

I now come to Urban Development which is a most important porftfolio became 35% of the population live in urban areas. We have Corporations, City Municipalities, Town Municipalities and it is these local bodies which can do something good for the poor people. We have not been thinking of new ideas for Corporations and Municipalities. It is enough, if we keep roads clean, which we do not do. It is enough if there are street lights which also we don't do. I should say that no Corporation or the Municipality is able to to give sufficient civil ameritiers to the people. Taking into account, the water supply we had this year, there was hue and cry regarding water supply. I would request the Hon'ble Minister to see that this year, water supply is given to every citizen in every local body. We are giving our attention to Water supply in Bangalore city alone. We had Cauvery I stage and before we could complete the I stage and commission it, they started II Stage and before the II stage was completed, they started III stage. I would suggest that we should have a programme for 25 years. In the same way, last year we had problems in the water supply in Mangalore City Corporation. The Nethravathi river had dried up and there was a stage when we thought that river had become dry. Unfortunately we had some rains. From the last eight years, we have been asking to have the vented Dam. Unfortunately it was started last year and it was not completed. I would request the Hon'ble Minister to see that the vented dam is completed by December, otherwise, we will have the same problem as we had last year.

As regards Urban Land Ceiling and Regulations, Hon'ble Member Sri Deshpande spoke about land exemption as per Section 20A. Unfortunately, the position we see to day is that everyone who is able to climb upto third floor of Vedhana Soudha is able to get

exemption. People who cannot reach Bangalore, do not get exemption. I would say that this is an Ulcer Act which has punished the poor people and the Government really is not benefitted out of this Act. I would request the Hon'ble Minister, if it is impossible, to scrap this Ulcer Act. Government can have a legislation stating that no one can own lands which have been prescribed under the Urban Land Ceiling Act I would suggest that the exemption should be given to the poor people.

Regarding Development Authorities, as some of the Hon'ble Members have said, they bring more hurdles than help for construction. If we take up the case of MUDA (MANGALORE URBAN DEVELOPMENT AUTHORITY), everybody goes for license. for R.T.C., for Commencement Certificate etc.,

(HON'BLE SPEAKER SRI S. M. KRISHNA in the Chair)

In fact, these things are not necessary under the Act. I would request the Hon'ble Minister to see that whatever Zoning Regulations are there under the MUDA or the Planning Authority, those should be adhered to, No authority either the MUDA or the Corporation should ask for the Commencement Certificates.

There is a peculiarity in South Canara on account of which the people are suffering this. Every land in South Canara has been prescribed as Agricultural land. Section 95 of the Land Revenue Act requires that whichever land is used for agriculture and which ever land is assessed for agriculture has to be converted. Those who have gone to Mangalore will definitely know what Hampanakatta is. It is a very busy place. There too, the private land is prescribed as the Agricultural land under the Act and a person who wants to reconstruct has to go through a lot of procedures and moreover he has to bribe every person for Conversion certificate. When the Hon'ble Chief Minister had come to Mangalore, I had requested him to scrap the conversion in areas wherever there is a Master plan for overall development or Comprehensive Development Plan for which he has agreed.

As regards Traffic in the cities, we are really neglecting the cities regarding traffic. Every Year thousands of vehicles are registered in Corporations where the roads still remain the same There are no fly-overs, no sub-ways, whereas in Delhi there have been lot of fly-overs, sub-ways, During Asaid, lot of congestion has been relieved. Today, if we take Mangalore City, there is a very busy street called Hampanakatta. There is absolutely no place for the people to walk and the street is so much congested. I would request the Hon'ble Minister to see that a fly-over and also a sub-way is constructed in that busy place We cannot ask the Mangalore City Corporation to construct the fly-over or the sub-way because they have no funds, It is the Government which has to come forward.

If we take up the Zilla Parishads, we see that there are so many programmes and crores and crores of Rupees are being spent from the Central Government and the State Government, but when it comes to the Municipalities and Corporations, there is not even a single paisa provided or spent by the Government. I would request the Hon'ble Minister to see that more money is given to the Municipalities as grant,

As regards Octroi grant, there is a difference of opinion regarding levying Octroi in Cities and Municipalities. I would say that it is a corrupt tax and this tax should not be levied by any local body. When the Octroi was abolished in 1979, Government levied 10% Surcharge on Sales Tax, levied Entry Tax, levied Turnover tax and levied Surcharge on Electricity Bills.

6-15 P. M.

The other day I got the answer from the Finance Minister that the sales tax collected in 1989-90 is Rs. 1089.83 crore rupees. The entry tax collected in 1989-90 is Rs 57.3 crore. The turnover tax collected in 1988-89 (the 1989-90 figures are not there) is Rs. 21.8 crores. The 10% of the total sales tax amounts to Rs. 108.99 crore. The total of all these viz., the surcharge on sales tax, the entry tax, the turnover tax and the surcharge on electricity bills amounts to Rs. 220 crore but we find in the Demand No. 34 that the total amount to be paid as compensation is only Rs. 67.22 crore. There is a difference of Rs. 160 crore. The Government is collecting Rs. 220 crore in lieu of octroi but is giving in the shape of compensation only Rs, 67.22 crores. I would request the Hon Minister to fight for his rights. When he is having this portfolio of Urban Development, he should see that proper money is given to the Corporations and Municipalities and if necessary, all the M.L.A.s will be behind him to see that this amount is recovered from the exchequer and given to the Corporations and municipalities. They always say that the Corporation should increase the tax. Our State is the one State which has the highest per capita taxes. I think it is the third in the whole country and now you cannot ask the Corporations and municipalities to charge more taxes.

Lastly, I would say, the rules and regulations which govern one Corporation should also govern the other Corporations. Regarding the benefits after retirement, the Bangalore Corporation Employees get much more but the Mangalore Corporation employees get much less. They get one-third of the gratuity which the employees of the Bangalore Corporation get. I would request the Hon. Minister to do justice and see that all the Corporations are governed by the same rules and regulations.

With these few words, I support the demand and I request the Hon. Minister to see that he gets more and more money for his portfolios,

† ಶ್ರೀ ಆರ್. ದಯಾನಂದರಾವ್ (ಗಾಂಧಿನಗರ).—ಮಾನ್ಯ ಸಭಾಧ್ಯಕ್ಷರೇ, ಈ ದಿನ ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಅವರ ಖಾತೆಗೆ ಸಂಬಂಧಪಟ್ಟ ಬೇಡಿಕೆಯನ್ನು ಸದನದಲ್ಲಿ ಮಂಡಿಸಿದ್ದಾರೆ. ಇದನ್ನು ನಾನು ಸ್ವಾಗತಿಸುತ್ತಾ ನನ್ನ ಕ್ಷೇತ್ರದ ಬಗ್ಗೆ ಕೆಲವು ಮಾತುಗಳನ್ನು ಆಡಲಿಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ ನನ್ನ ಕ್ಷೇತ್ರದಲ್ಲಿ ಹದಿಮೂರುವರೆ ಎಕರೆಯಷ್ಟು ಕೊಳಚೆ ಪ್ರದೇಶ ಇದೆ. ಕಳೆದ ಸುಮಾರು ೩೮ ವರ್ಷಗಳಿಂದ ಈ ಒಂದು ಕೊಳಚೆ ನಿರ್ಮೂಲನವನ್ನು ನಾವು ಮಾಡುತ್ತಿದ್ದೇವೆ, ಇವತ್ತು ನನಗನ್ನಿಸುತ್ತದೆ, ಏನೆಂದರೆ ಕೋಟ್ಯಾಂತರ ರೂಪಾಯಿಗಳನ್ನು ಈ ೩೮ ವರ್ಷಗಳಲ್ಲಿ ನಾವು ಖರ್ಚು ಮಾಡಿದ್ದೇವೆ. ಆದರೆ ಬೆಂಗಳೂರು ನಗರವಲ್ಲಿ ಇವತ್ತು ಕೊಳಚೆ ನಿರ್ಮೂಲನವನ್ನು ಮಾಡಲಿಕ್ಕೆ ಆಗಿಲ್ಲ. ಇದು ಏಕೆಂದರೆ ನಮ್ಮಲ್ಲಿ ಭ್ರಷ್ಟಾಚಾರ ತುಂಬಿದೆ. ಅಧಿಕಾರಿಗಳು ಮತ್ತು ಕಂಟ್ರಾಕ್ಟರ್‌ಗಳ ಬಗ್ಗೆ ಹೇಳುವಾಗ ನಾನು ಎಲ್ಲಾ ಅಧಿಕಾರಿಗಳ ಬಗ್ಗೆ ಹೇಳುತ್ತಿಲ್ಲ. ಐ.ಎ.ಎಸ್. ಅಥವಾ ಐ.ಪಿ.ಎಸ್. ವರ್ಗದವರಿಗಿಂತ ಕೆಳಗಡೆ ಇರತಕ್ಕಂಥ ಅಧಿಕಾರಿಗಳು ಕಳೆದ ೩೮ ವರ್ಷಗಳಿಂದ ಈ ಕೊಳಚೆ ನಿರ್ಮೂಲನದ ಕೆಲಸವನ್ನು ಮಾಡಿಕೊಂಡು ಬಂದಿದ್ದಾರೆ

ಅಧ್ಯಕ್ಷರೇ ನನ್ನ ಕ್ಷೇತ್ರ ಗುಡಿಸಲು ವಾಸಿಗಳು ಇರತಕ್ಕ ಕ್ಷೇತ್ರ. ಈಗಾಗಲೇ ಮಳೆ ಪ್ರಾರಂಭವಾಗಿದೆ. ಹೋದವರ್ಷ ಯಾವರೀತಿ ಮಳೆ ಬಂದು ಗುಡಿಸಲುಗಳನ್ನು ಕೆಡವಿ ಹಾಕಿತು. ಎಷ್ಟೋ ಜನರು ಅವರ ಪ್ರಾಣವನ್ನೂ ಕಳೆದುಕೊಂಡಿದ್ದಾರೆ. ಇದು ತಮಗೆ ಗೊತ್ತಿದೆ. ಮತ್ತೆ ಇದೇ ರೀತಿಯಾಗಿ ದೊಡ್ಡ ದೊಡ್ಡ ಚರಂಡಿಗೂ ನನ್ನ ಕ್ಷೇತ್ರದಲ್ಲಿವೆ. ಈ ಚರಂಡಿಗಳಿಗೆ ಗೋಡೆಗಳನ್ನು ಕಟ್ಟಬೇಕಾಗಿದೆ. ಕಾರ್ಪೊರೇಷನ್‌ನಲ್ಲಿ ದುಡ್ಡು ಕೇಳಿದರೆ, ಅವರು ದುಡ್ಡು ಇಲ್ಲವೆಂದು ಹೇಳುತ್ತಿದ್ದಾರೆ. ಈ ರೀತಿಯಾದರೆ, ಸರ್ಕಾರ ಯಾವರೀತಿ ಮುಂಜಾಗ್ರತೆ ಕ್ರಮವನ್ನು ತೆಗೆದುಕೊಳ್ಳುತ್ತದೆ ? ಇದರ ಬಗ್ಗೆ ಮಂತ್ರಿಗಳು ದೀರ್ಘವಾಗಿ ಯೋಚನೆ ಮಾಡಬೇಕಾಗುತ್ತದೆ. ಇದಾದ ಮೇಲೆ ಬೆಂಗಳೂರಿನಲ್ಲಿ ರಸ್ತೆಗಳನ್ನು ಯಾವರೀತಿ ಇವೆ ಎಂಬುದು ತಮಗೂ ಗೊತ್ತಿದೆ. ಅಧ್ಯಕ್ಷರೇ ತಾವೂ ಕೂಡಾ ಓಡಾಡುತ್ತಿದ್ದೀರಿ. ಅಧಿಕಾರಿಗಳ, ಕಾಂಟ್ರಾಕ್ಟ್ ಕೊಟ್ಟು ಈ ರಸ್ತೆಗಳನ್ನು ಯಾವರೀತಿ ಮಾಡಿಸಿದ್ದಾರೆಂದು ತಾವೂ ನೋಡಿರಬಹುದು ಈಗಲೇ ಮಳೆಗಾಲ ಪ್ರಾರಂಭವಾಗಿದೆ. ಹಳ್ಳಕೊಳ್ಳಗಳು ಜಾಸ್ತಿ ಇವೆ ಬಸ್ಸುಗಳು ಓಡಾಡುವುದಕ್ಕೆ ಸರಿಯಾದ ರಸ್ತೆಗಳು ನಮ್ಮಲ್ಲಿ ಇಲ್ಲ. ಇದರ ಪರವಾಗಿ ಮಂತ್ರಿಗಳು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ ಮತ್ತು ನಗರಾಭಿವೃದ್ಧಿ ಆಗಬೇಕೆಂದರೆ. ನಾವು ಬರೀ ಅಧಿಕಾರಿಗಳನ್ನು ಭ್ರಷ್ಟರೆಂದು ಸೂಚನೆ ಮಾಡುವುದಕ್ಕೆ ಆಗುವುದಿಲ್ಲ. ಏನು ಹಿಂದಿನ ಮಂತ್ರಿಗಳು, ಇವತ್ತಿನ ಮಂತ್ರಿಗಳು, ಇವತ್ತಿನ ಶಾಸಕರು ಏನಿದ್ದಾರೆ, ಅವರು ನಗರದಲ್ಲಿ ಮಾಡಿಕೊಂಡಿರುವ ಆಸ್ತಿಯನ್ನು ಡಿಕ್ಲೇರ್ ಮಾಡಬೇಕಾಗಿದೆ. ನಾವು ಚುನಾವಣೆಯಲ್ಲಿ ಗೆದ್ದು ಬಂದಾಗ ಒಳ್ಳೆಯ ಸರ್ಕಾರವನ್ನು ಕೊಡುತ್ತೇವೆಂದು ಹೇಳಿದ್ದೇವೆ. ಇದೇರೀತಿಯಾಗಿ ನಾವು ಇವತ್ತಿನದಿವಸ ನಡೆದುಕೊಂಡು ಹೋಗಬೇಕಾಗಿದೆ. ಇಲ್ಲದಿದ್ದರೆ ಹೋದ ಸರ್ಕಾರ ಯಾವ ಭ್ರಷ್ಟ ರೀತಿಯಲ್ಲಿ ತಲ್ಲೀನವಾಗಿತ್ತು ಅದೇರೀತಿಯಲ್ಲಿ ನಡೆದುಕೊಂಡರೆ ಜನರು ನಮ್ಮನ್ನೂ ಸಹ ಮನೆಗೆ ಕಳುಹಿಸುತ್ತಾರೆ ಎನ್ನುವುದರಲ್ಲಿ ಸಂದೇಹವಿಲ್ಲ. ಇನ್ನು ಬೆಂಗಳೂರು ಬಿ. ಡಿ. ಎ. ಬಗ್ಗೆ ಮಾತನಾಡಬೇಕೆಂದರೆ, ಹೊಸ ಲೇಔಟ್‌ಗಳು ನಡೆದೇ ಅಲ್ಲ. ಈಗಾಗಲೇ ಸುಮಾರು ೮೦ ಸಾವಿರ ಅರ್ಜಿದಾರರು ಇದ್ದಾರೆ ನಾಲ್ಕೈದು ವರ್ಷಗಳಿಂದ ಇವರಿಗೆ ಯಾವ ರೀತಿಯಾದ ಸೈಟುಗಳೂ ಸಿಕ್ಕಿಲ್ಲ ಬಿ. ಡಿ. ಎ.ಗೆ ದುಡ್ಡುಗಳನ್ನು ಕಟ್ಟಿದ್ದಾರೆ, ಸೈಟಿಗಾಗಿ ಜನ ನಿರೀಕ್ಷೆ ಮಾಡುತ್ತಿದ್ದಾರೆ. ಯಾವಾಗ ಬಿ. ಡಿ. ಎ. ನವರು ಸೈಟು ಕೊಡುತ್ತಾರೆಂದು. ಪ್ರೈವೇಟ್ ಲೇಔಟ್ ರಚನೆ ಮಾಡಿರುವ ಸೊಸೈಟಿಗಳವರು ಈ ಅಧಿಕಾರಿಗಳ ಜೊತೆ ಹೊಂದಾಣಿಕೆ ಮಾಡಿಕೊಂಡು ಬೇಕಾದಷ್ಟು ಇವತ್ತಿನ ದಿವಸ ಹಣ ಲೂಟಿ ಮಾಡುತ್ತಿದ್ದಾರೆ. ಬಿ ಡಿ. ಎ.ನಲ್ಲಿ ಸರ್ಕಾರದಿಂದ ಒಂದು ಕಮಿಟಿಯನ್ನು ಮಾಡಿ ಯಾರು ಯಾರು ಭ್ರಷ್ಟರು ಇದ್ದಾರೆ, ಅಂತಹ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಮತ್ತು ಸರ್ಕಾರ ಕೊನೆಯ ಪಕ್ಷ ಒಂದು ಲಕ್ಷ ಜನರಿಗಾದರೂ ನಿವೇಶನ ಹಂಚುವುದಕ್ಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಹಿಂದಿನ ಸರ್ಕಾರದವರು ಸುಮಾರು ೧೫ ಸಾವಿರ ಜನ ಪರಿಶಿಷ್ಟ ಜಾತಿಯವರಿಗೆ ಹಸಿರು ಕಾರ್ಡ್‌ಗಳನ್ನು ಕೊಟ್ಟಿದ್ದಾರೆ. ಬರೀ ೧೫೦೦ ಜನರಿಗೆ ಮಾತ್ರ ಸೈಟ್‌ಗಳನ್ನು ಕೊಟ್ಟಿದ್ದಾರೆ. ಇದರಿಂದ ಹೆಚ್ಚಿನ ಜನರು ನಿರಾಶೆ ಹೊಂದಿದ್ದಾರೆ. ಇದರ ಬಗ್ಗೆ ಮಂತ್ರಿಗಳು ಸೂಕ್ತಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಬೆಂಗಳೂರು ನಗರದಲ್ಲಿ ದಿನೇ ದಿನೇ ಫ್ಲೋಟಿಂಗ್ ಪಾಪ್ಯುಲೇಷನ್ ಜಾಸ್ತಿಯಾಗುತ್ತಿದೆ. ಈ ಜನಸಂಖ್ಯೆಯನ್ನೂ ಹಾಗೂ ಇದರಿಂದಾಗುವ ಅಪಘಾತಗಳನ್ನು ತಡೆಗಟ್ಟಬೇಕಾದರೆ ಬೆಂಗಳೂರು ನಗರದಲ್ಲಿ ಸರಿಯಾದ ರೀತಿಯಲ್ಲಿ

ಫ್ಲೈ ಓವರ್ಸ್ ಮಾಡಬೇಕಾಗಿದೆ. ಇದರ ಬಗ್ಗೆ ಮಂತ್ರಿಗಳು ದೀರ್ಘವಾದ ಯೋಜನೆ ಹಾಕಿಕೊಂಡು ಆದಷ್ಟು ಬೇಗ ಬೆಂಗಳೂರು ನಗರದಲ್ಲಿ ಫ್ಲೈ ಓವರ್‌ಗಳನ್ನು ಕಟ್ಟಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟನ್ನು ಹೇಳಿ ತಾವು ನನಗೆ ಎರಡು ಮಾತುಗಳನ್ನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನನ್ನ ವಂದನೆಗಳನ್ನು ಸಲ್ಲಿಸುತ್ತಾ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.— ಶ್ರೀ ಹನುಮೇಗೌಡರು.

ಶ್ರೀ ಸಿ. ಬೈರೇಗೌಡ — ಅಧ್ಯಕ್ಷರೇ ಆರೂವರೆ ಘಂಟೆಯಾಗುತ್ತಿದೆ. ೧೧ ಘಂಟೆಯಿಂದ ಕುಳಿತಿದ್ದೇವೆ. ಇನ್ನೂ ಮಾತನಾಡುವವರು ಇದ್ದಾರೆ. ನಾನೂ ಕೂಡಾ ಮಾತನಾಡಬೇಕು. ನನಗೆ ಹೆಚ್ಚು ಸಮಯ ಬೇಕಾಗಿದೆ. ಆದ್ದರಿಂದ ನಾಳೆಗೆ ಚರ್ಚೆಯನ್ನು ಮುಂದುವರಿಸಿದರೆ ಒಳ್ಳೆಯದು.

ಅಧ್ಯಕ್ಷರು.— ಹನುಮೇಗೌಡರು ಮುಗಿಸಿದ ಮೇಲೆ ನೋಡೋಣ.

†ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).— ಸನ್ಮಾನ್ಯ ಅಧ್ಯಕ್ಷರೇ, ನಾನು ನಾಳೆ ಊರಿನಲ್ಲಿರುವುದಿಲ್ಲ. ಆದ್ದರಿಂದ ಇವತ್ತೇ ಮಾತನಾಡಿ ಮುಗಿಸಿಬಿಡುತ್ತೇನೆ. ಮಾನ್ಯ ಪೌರಾಡಳಿತ ಸಚಿವರು ಮಂಡಿಸಿರತಕ್ಕಂಥ ಡಿಮ್ಯಾಂಡ್‌ಗಳನ್ನು ಸ್ವಾಗತಿಸುತ್ತಾ ಕೆಲವು ವಿಚಾರಗಳನ್ನು ಹೇಳುತ್ತೇನೆ. ೧೯೭೩ರಲ್ಲಿ ಹಾಸನದ ಬೀರನಹಳ್ಳಿ ಕೆರೆ ಅಂಗಳದಲ್ಲಿ ಸುಮಾರು ೮೨೦ ಮನೆಗಳನ್ನು ಕಟ್ಟಿಸುವುದಕ್ಕೆ ಒಂದು ಕೋಟಿ ಎಂಬತ್ತಮೂರು ಲಕ್ಷ ರೂಪಾಯಿಗಳ ಒಂದು ಅಂದಾಜನ್ನು ತಯಾರು ಮಾಡಿ ಟೆಂಡರ್ ಕಾಲ್‌ಫಾರ್ ಮಾಡಿದ್ದರು. ನಂತರ ಈ ಮನೆಗಳನ್ನು ೮೩ನೇ ಇಸವಿಯಲ್ಲಿ ಸ್ವಾಧೀನಕ್ಕೆ ಕೊಟ್ಟರು. ನಾನು ತಮ್ಮ ಮೂಲಕ ಮಾನ್ಯ ಪೌರಾಡಳಿತ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದೊಂದು ದೊಡ್ಡ ದುರಂತ. ಕರ್ಮಕಾಂಡ ಎಂದು ಹೇಳಿದರೆ ತಪ್ಪಾಗಲಾರದು. ಎಷ್ಟರಮಟ್ಟಿಗೆ ಬಡವರ ಶೋಷಣೆ ಮಾಡಿ ನಿಮ್ಮ ಅಧಿಕಾರಿಗಳು ನಿರ್ಭೀತಿಯಿಂದ, ನಿರ್ಭಯದಿಂದ ಮನೆಗಳನ್ನು ಕಟ್ಟಿ ಹಣ ದರೋಡೆ ಮಾಡಿದ್ದಾರೆ ಎಂಬುದನ್ನು ದಯವಿಟ್ಟು ಮಾನ್ಯ ಸಚಿವರು ಇನ್‌ಸ್ಪೆಕ್ಟ್ ಮಾಡಬೇಕೆಂದು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ. ಮಾನ್ಯ ಸಚಿವರು ಬಡವರ ಬಗ್ಗೆ ಅನುಕಂಪ ಇಟ್ಟುಕೊಂಡಿದ್ದಾರೆ. ಏನು ಸಮಸ್ಯೆಗಳು ಬಂದರೂ ಕೂಡಾ ತಕ್ಷಣ ಹೋಗಿ ಬಗೆಹರಿಸುತ್ತೇನೆಂಬ ಆಶ್ವಾಸನೆಯನ್ನು ವಾಗ್ದಾನವನ್ನು ಕೊಟ್ಟಿದ್ದಾರೆ. ಈಗಾಗಲೇ ಅನೇಕ ಕಡೆ ಹೋಗಿ ನೋಡಿ ಸಮಸ್ಯೆಗಳನ್ನು ಬಗೆಹರಿಸಿಕೊಟ್ಟಿದ್ದಾರೆ. ಹಾಸನ ಜನತೆಯ ಪರವಾಗಿ ಅವರಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ಅವರು ಈ ಶಾಸನಸಭೆ ಮುಗಿದ ತಕ್ಷಣ ಹಾಸನದ ಈ ಹೌಸಿಂಗ್ ಬೋರ್ಡ್ ಕಾಲೋನಿಗೆ ವಿಸಿಟ್ ಮಾಡಿ ಅಲ್ಲಿ ಆಗಿರತಕ್ಕಂಥ ಅನ್ಯಾಯಗಳನ್ನು ಸರಿಪಡಿಸಬೇಕು. ಸರಿಪಡಿಸತಕ್ಕಂಥ ಒಂದು ಶಕ್ತಿ ಅವರಿಗೆ ಇದೆ ಎಂದು ನಾನು ಭರವಸೆ ಇಟ್ಟುಕೊಂಡಿದ್ದೇನೆ ಎಂಬ ಮಾತನ್ನು ಅವರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಹೌಸಿಂಗ್ ಬೋರ್ಡ್ ಕಾಲೋನಿ ಮಧ್ಯದಲ್ಲಿ ಒಂದು ಚರಂಡಿ ಹೋಗುತ್ತದೆ. ಆ ಚರಂಡಿ ಕಟ್ಟಿದರು. ಹೌಸಿಂಗ್ ಬೋರ್ಡ್ ಕಾಲೋನಿ ಕೆಳಗೆ ಒಂದು ಕೆರೆ ಇದೆ. ಚನ್ನಪಟ್ಟಣದ ಕೆರೆ ಎಂದು ಅದರ ಹೆಸರು. ಆ ಕೆರೆಗೆ ಕೋಡಿ ಕಟ್ಟಿಸಿದರು. ಹೌಸಿಂಗ್ ಬೋರ್ಡ್ ಕಾಲೋನಿ ಪಕ್ಕದಲ್ಲಿ ಒಂದು ನ್ಯಾಷನಲ್ ಹೈವೇ ಹೋಗುತ್ತದೆ. ಅದಕ್ಕೆ ಸೇತುವೆ ಕಟ್ಟಿದರು. ಅದರ ಪಕ್ಕದಲ್ಲಿ ರೈಲ್ವೆ ಲೈನ್ ಹೋಗುತ್ತದೆ. ಅದಕ್ಕೆ ಬ್ರಿಡ್ಜ್ ಕಟ್ಟಿದರು. ಈ ನಾಲ್ಕೂ ಖರ್ಚನ್ನು ಅಂದರೆ ೪೭ ಲಕ್ಷ ರೂ.ಗಳ ಹೊರೆಯನ್ನು ಆ ಬಡಪಾಯಿಗಳ ಮೇಲೆ ಹಾಕಿದರು. ಚನ್ನಪಟ್ಟಣ ಕೆರೆ ಕೋಡಿಗೆ, ರೈಲ್ವೆ ಬ್ರಿಡ್ಜ್, ನ್ಯಾಷನಲ್ ಹೈವೆ ಬ್ರಿಡ್ಜ್‌ಗೂ, ಹೌಸಿಂಗ್ ಬೋರ್ಡ್ ಕಾಲೋನಿಗೂ ಏನು ಸಂಬಂಧ. ಅಧಿಕಾರಿಗಳು ಮನಸ್ಸೋ ಇಚ್ಛೆ ಮಾಡಿದ್ದಾರೆ ಅವರಿಗೆ ಹೇಳುವವರು ಕೇಳುವವರು ಯಾರೂ ಇಲ್ಲ ಎಂದು ಮನಸ್ಸಿಗೆ ಬಂದ ಹಾಗೆ ಮಾಡಿ, ಆದರ ರೇಟನ್ನು ಯದ್ವಾತದ್ವಾ ಹೆಚ್ಚಿಸಿದ್ದಾರೆ. ಅವರಿಗೆ ಏನಾದರೂ ಘನತೆ, ಗಾಂಭೀರ್ಯ, ಕಾನ್‌ಷಿಯಸ್‌ನೆಸ್ ಏನಾದರೂ ಇದೆಯೇ? ೧೯೭೩ರಲ್ಲಿ ಇ.ಡಬ್ಲ್ಯು.ಎಸ್. ಮನೆಗೆ ನಿಗದಿ ಮಾಡಿದ್ದ ಹಣ ೯೫೦೦ ರೂಪಾಯಿಗಳು. ೧೯೭೬ನೇ ಇಸವಿಯಲ್ಲಿ ಇದು ೧೮ ಸಾವಿರಕ್ಕೆ ಏರಿತು, ೧೯೭೮ನೇ ಇಸವಿಯಲ್ಲಿ ೨೫ ಸಾವಿರಕ್ಕೆ ಏರಿತು. ೧೯೮೦ರಲ್ಲಿ ೬೦ ಸಾವಿರಕ್ಕೆ ಏರಿದೆಯಂತೆ ಈಗ ಇನ್ನೂ ಮುಂದೆ ಹೋಗುತ್ತದೆಂದು ಹೇಳುತ್ತಿದ್ದಾರೆ. ಈ ರೇಟ್‌ನಲ್ಲಿ ಮನೆ ಕೊಟ್ಟು ಯಾವ ಬಡವರನ್ನು ಉದ್ಧಾರ ಮಾಡುವುದಕ್ಕೆ ಸಾಧ್ಯವಾಗುತ್ತದೆ? ೯೫೦೦ ರೂಪಾಯಿಗೆ ಟೆಂಡರ್ ಕಾಲ್‌ಫಾರ್ ಮಾಡಿ, ನಂತರ ೬೦ ಸಾವಿರ ರೂಪಾಯಿ ಬೇಕಾದರೆ ತೆಗೆದುಕೊಳ್ಳಿ, ತೆಗೆದುಕೊಳ್ಳದೇ ಹೋದರೆ ಕಟ್ಟಿದ ಹಣ ಬಿಸಾಕುತ್ತೇವೆ ಎಂದು ಹೇಳಿದರೆ ಇವರು ಮನುಷ್ಯರೇ? ಇವರು ಸರ್ಕಾರದ ಕೆಲಸದಲ್ಲಿರುವುದಕ್ಕೆ ಯೋಗ್ಯರೇ ಎಂಬ ಮಾತನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ೧೯೮೦ನೇ ಇಸವಿಯಲ್ಲಿ ನಾನು ಇದರ ಬಗ್ಗೆ ಇದನ್ನು ಪ್ರಸ್ತಾಪ ಮಾಡಿದೆ. ಹುಚ್ಚಾ ಟೆ.

ರೇಟ್ ಹಾಕಿದ್ದಾರೆ. ಸೇತುವೆಗೂ, ರೈಲ್ವೆ ಬ್ರಿಡ್ಜ್‌ಗೂ ಅಲ್ಲಿಂದ ನ್ಯಾಷನಲ್ ಹೈವೆಗೂ ಇದಕ್ಕೂ ಏನು ಸಂಬಂಧ ಎಂದು ಗಲಾಟೆ ಮಾಡಿದೆ. ಆಗ ಮಾನ್ಯ ಸಚಿವರಾಗಿದ್ದವರು ಒಂದು ಆದೇಶ ಕೊಟ್ಟರು. ಅಸೆಂಬ್ಲಿಯಲ್ಲಿ ನಾನು ಕಾಲ್ ಅಟೆನ್‌ಷನ್ ಕೊಟ್ಟಿದ್ದೆ. ಆಗ ಅವರು ಮೂರು ಜನರ ಒಂದು ಕಮಿಟಿ ಮಾಡಿದರು. ಹೌಸಿಂಗ್ ಬೋರ್ಡ್ ಚೇರ್ಮನ್, ಚೀಫ್ ಎಂಜಿನಿಯರ್ ಮತ್ತು ಇನ್ನೊಬ್ಬರು. ನೀವೂ ಹೋಗಿ, ಹನುಮೇಗೌಡರೇ ಎಂದು ಹೇಳಿದರು. ಅವರ ಚೇಂಬರ್‌ನಲ್ಲಿ ಮೀಟಿಂಗ್ ಕರೆದರು. ಎರಡು ಮೀಟಿಂಗ್ ಆಯಿತು. ಆ ಮೀಟಿಂಗ್‌ಗೆ ನನ್ನನ್ನು ಕರೆದಿದ್ದರು, ನಾನು ಹೋಗಿದ್ದೆ ನಾನು ಆಗ ಹೇಳಿದೆ. ೧೦ ವರ್ಷಗಳಲ್ಲಿ ಇಷ್ಟು ಜಾಸ್ತಿ ಮಾಡಿದ್ದೀರಿ ಇದು ನ್ಯಾಯವಲ್ಲ ಇದು ಸರಿಯಲ್ಲ ನಾವು ಇಷ್ಟು ಜಾಸ್ತಿ ಹಣ ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳಿದ ಮೇಲೆ ಇದನ್ನು ನೋಡಿ ಪರಿಶೀಲನೆ ಮಾಡುತ್ತೇನೆಂದು ಹೇಳಿದರು ಅಷ್ಟರಲ್ಲಿ ಅಸೆಂಬ್ಲಿ ಡಿಸಾಲ್ವ್ ಆಯಿತು. ನನ್ನ ಮೆಂಬರ್‌ಗಿರಿ ಹೋಯಿತು. ಈ ಮಧ್ಯೆ ೧೯೮೮ರಲ್ಲಿ ಒಂದು ಗಮನ ಸೆಳೆಯುವ ಸೂಚನೆಯನ್ನು ಕೌನ್ಸಿಲ್‌ನಲ್ಲಿ ಮಾನ್ಯ ಸದಸ್ಯರಾದ ಶ್ರೀ ಬಿ. ಬಿ. ಶಿವಪ್ಪನವರು ಕೊಟ್ಟು ಕೇಳಿದರು. ಏತಕ್ಕೆ ಇಷ್ಟು ರೇಟ್ ಜಾಸ್ತಿ ಮಾಡಿದ್ದೀರಿ ಎಂದು. ಆಗಲೇ ಭಾರಿ ಭಾರಿ ಜೋರಾಗಿ ಮಾತನಾಡುತ್ತಿದ್ದರು ಮಾನ್ಯ ದೇಶಪಾಂಡೆಯವರು. ನಾನು ಅವರನ್ನು ಈ ವಿಷಯ ಕೇಳೋಣವೆಂದು ನಿನ್ನೆಯಿಂದ ಕಾಯುತ್ತಿದ್ದೇನೆ. ಅವರು ಸಿಗಲಿಲ್ಲ. ನಾಳೆ ಸಿಗುತ್ತಾರೆ ಬಿಡಿ ಕೇಳೋಣ. ಅವರೊಂದು ಆದೇಶ ಕೊಟ್ಟರು ಸ್ವಾಮಿ. ೧೮–೨–೮೯ರಲ್ಲಿ ಗೃಹ ಮಂಡಲಿಯವರು ಮೊದಲು ಪ್ರಕಟಿಸಿದ ಬೆಲೆಗೆ ಮನೆ ಕೊಡಬೇಕು ಎಂದು ಆದೇಶ ಕೊಟ್ಟರು. ನಿಮ್ಮ ರೇಟ್ ಯದ್ವಾತದ್ವ ಜಾಸ್ತಿ ಮಾಡಿದ್ದಕ್ಕೆ ನಾವು ಜವಾಬ್ದಾರರಲ್ಲ ಮೂಲ ಬೆಲೆಗೆ ಮನೆ ಕೊಡುತ್ತೇವೆಂದು ಅವರು ಕೌನ್ಸಿಲ್‌ನಲ್ಲಿ ಆದೇಶ ಕೊಟ್ಟರು. ಆದರೆ ಅದರ ಬಗ್ಗೆ ಇದುವರೆವಿಗೂ ಏನೂ ಆಗಿಲ್ಲ. ಅಲ್ಲಿಂದ ಮನೆಗಳ ರೇಟ್ ಯದ್ವಾತದ್ವಾ ಏರಿಸಿದ್ದಾರೆ. ಮಾನ್ಯ ಗುಂಡೂರಾವ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಅವರ ಗಮನಕ್ಕೆ ಈ ವಿಷಯ ತಂದು ಅವರು ರೇಟ್ ಯದ್ವಾತದ್ವಾ ಜಾಸ್ತಿ ಮಾಡಿದ್ದಾರೆ ಎಂದು ಹೇಳಿದೆ ಅವರು ಇದನ್ನೆಲ್ಲಾ ವಿಚಾರಿಸಿ ಇದು ಗದ್ದೆ ಬಯಲು ಆಗಿದ್ದರಿಂದ ರೇಟ್ ಜಾಸ್ತಿಯಾಗಿದೆ ಎಂದರು ಇಲ್ಲಿ ಫೌಂಡೇಶನ್ ಹಾಕುವುದು ಕಷ್ಟ ಎಂದು ಹೇಳಿದರು...

ಶ್ರೀ ಸಿ. ಬೈರೇಗೌಡ.— ಮನೆಗಳು ಮುಗಿದಿವೆಯೇ?

ಶ್ರೀ ಕೆ. ಹೆಚ್. ಹನುಮೇಗೌಡ.— ನೀವು ಸ್ವಲ್ಪ ಸುಮ್ಮನೆ ಕುಳಿತುಕೊಳ್ಳಿ. ನಿಮ್ಮದು ಆಮೇಲೆ ಹೇಳುತ್ತೇನೆ.

ಶ್ರೀ ಸಿ. ಭೈರೇಗೌಡ.—ನಾನು ನಿಮಗೆ ಸಹಾಯ ಮಾಡಲು ಬಂದೆ.

ಶ್ರೀ ಕೆ. ಹೆಚ್. ಹನುಮೇಗೌಡ.— ನೀವು ಸ್ವಲ್ಪ ಸುಮ್ಮನೆ ಕುಳಿತುಕೊಂಡರೆ ಅದಕ್ಕಿಂತ ದೊಡ್ಡ ಸಹಾಯ ಬೇರೆ ಇಲ್ಲ. ಅಲ್ಲಿ ಬೇಕಾದಷ್ಟು ಓಪನ್ ಸ್ಪೇಸ್ ಇದೆ ಆ ಜಾಗವನ್ನು ಬೇಕಾದರೆ ಹರಾಜು ಹಾಕಿ ಅದರಿಂದ ಬಂದ ಹಣವನ್ನು ಎಕ್ಸ್‌ಟ್ರಾ ಖರ್ಚು ಆಗಿರುವಂಥಾದ್ದಕ್ಕೆ ಲೆಕ್ಕ ಹಾಕಿಕೊಳ್ಳಿ ಎಂದು ಹೇಳಿದರು. ಅವರೊಂದು ಲೆಕ್ಕ ಹೇಳಿದರು ೧ ಕೋಟಿ ೮೩ ಲಕ್ಷ ಎಸ್ಟಿಮೇಟ್ ಆಗಿದ್ದರೆ ಈಗ ಅದು ೨ ಕೋಟಿ ೩೦ ಲಕ್ಷ ರೂಪಾಯಿಗಳಾಗಿವೆ. ಅಲ್ಲಿಗೆ ಒಂದು ಕೋಟಿ ರೂಪಾಯಿಗಳು ಜಾಸ್ತಿ ಹಣ ಖರ್ಚಾಗಿದೆ. ಅಂದರೆ ೪೩ ಪರ್ಸೆಂಟ್ ಜಾಸ್ತಿ ಖರ್ಚು ಆಗಿರುವುದರಿಂದ ನಮಗೆ ಅವರು ಒಂದು ಆಶ್ವಾಸನೆ ಕೊಟ್ಟರು. ಏನೆಂದರೆ ಅಲ್ಲಿರುವ ಓಪನ್ ಸ್ಪೇಸ್‌ನ್ನು ನೀವು ಹರಾಜು ಹಾಕಿ ಅದರಿಂದ ಬರುವ ಹಣದಿಂದ ಮೂಲ ಬೆಲೆಗೆ ಮನೆ ಅಲಾಟ್ ಮಾಡಿ ಎಂದು ಹೇಳಿದರು. ಅದರಂತೆ ಆ ಜಾಗದ ಹರಾಜಿನಿಂದ ಒಂದು ಕೋಟಿ ರೂಪಾಯಿ ಬಂದಿದೆ. ಅಲ್ಲಿಗೆ ಇವರು ಹೆಚ್ಚು ಖರ್ಚು ಮಾಡಿದ ಹಣವನ್ನು ಈ ಹಣಕ್ಕೆ ಜಮಾ ಹಾಕಿಕೊಂಡರು. ಈಗ ರೈಲ್ವೆ ಬ್ರಿಡ್ಜ್ ಮತ್ತು ಚನ್ನಪಟ್ಟಣದ ಕೆರೆ ಏರಿ ಕಟ್ಟಿದ ಖರ್ಚನ್ನು ಹೌಸಿಂಗ್ ಬೋರ್ಡ್ ಕಾಲೋನಿಗೆ ಖರ್ಚಿಗೆ ಸೇರಿಸಿದ್ದಾರೆ ಮತ್ತು ಅವರನ್ನು ಆ ಹಣ ಕೊಡಿ ಎಂದು ಹೇಳಿದರೆ ಹೇಗೆ? ಸುಮಾರು ೪೬ ಲಕ್ಷ ರೂಪಾಯಿಗಳ ಖರ್ಚನ್ನು ಅವರ ಮೇಲೆ ಹಾಕಿದರೆ ಹೇಗೆ? ರೈಲ್ವೆ ಬ್ರಿಡ್ಜ್ ಕಟ್ಟಿದ್ದೀರಿ ಆ ಇಲಾಖೆಯವರು ಪಾಪ ಬಹಳ ಕಷ್ಟದಲ್ಲಿ ಇದ್ದಾರೆಯೇ? ಹೋಗಲಿ ದಾನ ಮಾಡಿ ಎಂದು ಹೇಳುವುದಕ್ಕೆ. ಇನ್ನು ರೈಲ್ವೆ ಬ್ರಿಡ್ಜ್ ಕಟ್ಟಿದ ಹಣವನ್ನು ಇವರೇತಕ್ಕೆ ಕೊಡಬೇಕು. ಸರ್ಕಾರಿ ನೌಕರರು ಮಾಡುವ ಕೆಲಸ ಇದು ನೋಡಿ. ರೈಲ್ವೆ ಬ್ರಿಡ್ಜ್ ಕಟ್ಟಿದರೆ ಅವರಿಗೆ ಆ ಹಣ ಹಾಕಿ, ನ್ಯಾಷನಲ್ ಹೈವೇ ಮಾಡಿದ್ದರೆ ಆ ಹಣವನ್ನು ಲೋಕೋಪಯೋಗಿ ಇಲಾಖೆಯವರು ವಹಿಸಿಕೊಳ್ಳಲಿ ಅದು ಬಿಟ್ಟು ಸುಮಾರು ೪೭ ಪರ್ಸೆಂಟ್‌ನಷ್ಟು ಹಣ ಈ ಮನೆಗಳವರ ಮೇಲೆ ಹಾಕಿದರೆ ಇದು ನ್ಯಾಯವೆಂದು ಯಾರಾದರೂ ಹೇಳುತ್ತಾರೆಯೇ? ಆದ್ದರಿಂದ ನಾನು ಮಾನ್ಯ ಸಚಿವರಲ್ಲಿ ಪ್ರಾರ್ಥನೆ

ಮಾಡಿಕೊಳ್ಳುತ್ತೇನೆ. ಸುಮಾರು ೪೭ ಪರ್ಸೆಂಟ್‌ನಷ್ಟು ಜಾಸ್ತಿ ಹಣವನ್ನು ಮನೆಗಳವರ ಮೇಲೆ ಏನು ಹಾಕಿದ್ದಾರೆ ಇದು ಸರಿಯಲ್ಲ. ಇದನ್ನು ತಾವು ಪರಿಶೀಲನೆ ಮಾಡಬೇಕು..........

(ಅಧ್ಯಕ್ಷರು ಗಂಟೆ ಬಾರಿಸಿದರು)

ಶ್ರೀ ಕೆ. ಎಚ್. ಹನುಮೇಗೌಡ.—ಸ್ವಾಮಿ ತಾವು ದಯವಿಟ್ಟು ಬೆಲ್ ಮಾಡಬೇಡಿ. ನಾನು ಈ ವಿಚಾರವನ್ನು ಪ್ರಸ್ತಾಪ ಮಾಡಲು ಸುಮಾರು ೩-೪ ದಿವಸಗಳಿಂದ ಕಾದು ಕುಳಿತಿದ್ದೇನೆ. ನಾನು ಚುನಾವಣೆಗೆ ನಿಂತಾಗ ಆ ಜನ ಎಲ್ಲಾ ಬಂದು ನೋಡಿ ಹನುಮೇಗೌಡರೇ ಹಿಂದೆ ನೀವು ಸದಸ್ಯರಾಗಿದ್ದಾಗ ಈ ವಿಷಯ ಪ್ರಸ್ತಾಪ ಮಾಡಿದ್ದೀರಿ ಅಲ್ಲಿಂದ ಇಲ್ಲಿಯವರೆಗೆ ಏನೂ ಆಗಲಿಲ್ಲ ದಯಮಾಡಿ ನೀವು ಈ ಸಾರಿ ಆದರೂ ನಮಗೆ ಸಹಾಯ ಮಾಡಿ ಎಂದು ಕಣ್ಣೀರು ಹಾಕಿಕೊಂಡು ಹೇಳಿದರು. ನಾನು ಆಗ ಅವರಿಗೆ ಹೇಳಿದ್ದೇನೆ, ನನ್ನ ಕೈಯಲ್ಲಿ ಆದ ಸಹಾಯ ನಾನು ಮಾಡುತ್ತೇನೆಂದು ಭರವಸೆ ಕೊಟ್ಟಿದ್ದೇನೆ. ಮಾನ್ಯ ಮಂತ್ರಿಗಳನ್ನು ಒಪ್ಪಿಸಿಕೊಂಡೇ ನಾನು ಹೋಗಬೇಕೆಂದು ನಿಂತಿದ್ದೇನೆ. ಇದಕ್ಕಾಗಿ ನಾನು ನಿನ್ನೆಯಿಂದ ಕಾದಿದ್ದೇನೆ. ಮನೆ ವಿಚಾರ ಈ ರೀತಿ ಆದರೆ, ಬಡ್ಡಿದರ ಯಾವ ರೀತಿ ಹಾಕಿದ್ದಾರೆಂದು ಹೇಳುತ್ತೇನೆ.

ಯಾವ ಮಾರವಾಡಿ ಕೂಡಾ ಇವರಷ್ಟು ಬಡ್ಡಿ ಹಾಕಲಾರ. ಯಾವಾಗ ಮನೆ ಅಲಾಟ್ ಮಾಡುತ್ತಾರೆ ಆವಾಗ ೧೦ ರಿಂದ ೧೨ ಪರ್ಸೆಂಟ್ ಸಿಂಪಲ್ ಇಂಟರೆಸ್ಟ್ ಹಾಕುತ್ತಾರೆ. ಮುಂದಕ್ಕೆ ಅವರಿಗೆ ವರ್ಷಕ್ಕೆ ಇಷ್ಟಿಷ್ಟು ಕಂತು ಎಂದು ಕಂತನ್ನು ನಿಗದಿ ಮಾಡುತ್ತಾರೆ. ಇದು ಆದಮೇಲೆ ಆ ಕಂತು ಕಟ್ಟದೆ ಏನಾದರೂ ಡಿಫಾಲ್ಟರ್ ಆದರೆ ಪುನಃ ಆ ಕಂತಿನ ಮೇಲೆ ಸಿಂಪಲ್ ಇಂಟರೆಸ್ಟ್ ೧೦ ರಿಂದ ೧೨ ಪರ್ಸೆಂಟ್ ಹಾಕುತ್ತಾರೆ. ಅದು ಅಮೌಂಟ್ ಮೇಲೆ ಡಿಪೆಂಡ್ ಆಗುತ್ತದೆ. ಅದನ್ನು ಒಂದು ಪಕ್ಷ ಕಟ್ಟಲಿಲ್ಲ ಎಂದರೆ ಡಿಫಾಲ್ಟರ್ ಆದ ಎಂದರೆ ಮತ್ತೆ ಪೀನಲ್ ಇಂಟರೆಸ್ಟ್ ೧೦ ರಿಂದ ೧೨ ಪರ್ಸೆಂಟ್ ಹಾಕುತ್ತಾರೆ. ಸ್ವಾಮಿ ೧೦೦ ರೂಪಾಯಿಗೆ ಒಂದು ವರ್ಷಕ್ಕೆ ಡಿಫಾಲ್ಟರ್ ಆದರೆ ೫೧ ಪರ್ಸೆಂಟ್ ಬಡ್ಡಿ ಬೀಳುತ್ತದೆ. ಯಾವ ಮಾರವಾಡಿ ಇಷ್ಟು ಬಡ್ಡಿ ಹಾಕುವುದಕ್ಕೆ ಸಾಧ್ಯ ಎಂದು ಗೊತ್ತು ಮಾಡಿಕೊಡಬೇಕೆಂದು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ. ಯಾರು ಹಾಕುತ್ತಾರೆ ಇಷ್ಟು ಬಡ್ಡಿಯನ್ನು. ಬಡ್ಡಿ ಮೇಲೆ ಬಡ್ಡಿ. ಒಂದು ವರ್ಷ ಕಂತು ಕೊಡಲಿಲ್ಲ ಎಂದರೆ, ಆ ಕಂತಿಗೆ ಬಡ್ಡಿ, ಪುನ ಡಿಫಾಲ್ಟರ್ ಆದರೆ, ಆ ಅಮೌಂಟ್ ಮೇಲೆ ಚಕ್ರಬಡ್ಡಿ, ಸಿಂಪಲ್ ಇಂಟರೆಸ್ಟ್ ಎಲ್ಲಾ ಆಡ್ ಆಗುತ್ತದೆ.

ಅಧ್ಯಕ್ಷರು.— ಯಾವ ಮಾರವಾಡಿ ಎಂದು ಹೇಳಿದರಲ್ಲ, ಅದು ಒಂದು ಸಮಾಜದ ಮೇಲೆ ಪರಿಣಾಮವಾಗುತ್ತದೆ. ಸಾಲ ಕೊಡುವವರು ಯಾರೂ ಇಷ್ಟೊಂದು ಬಡ್ಡಿ ಹಾಕುವುದಿಲ್ಲ ಎಂದು ಹೇಳಿ.

ಶ್ರೀ ಕೆ. ಹೆಚ್. ಹನುಮೇಗೌಡ.—ಆಯಿತು, ಪಾಪ ಮಾರವಾಡಿ ಎಂದು ಏತಕ್ಕೆ ಹೇಳುವುದಕ್ಕೆ ಹೋಗಲಿ. ಅದನ್ನು ವಾಪಸ್ ತೆಗೆದುಕೊಳ್ಳುತ್ತೇನೆ. ಅದೊಂದು ಪದ್ಧತಿ ಇದೆಯಲ್ಲ, ಆದಕ್ಕೆ ಹಾಗೆಂದೆ. ಅವರೂ ಕೂಡಾ ಇದನ್ನು ಕೇಳಿದರೆ, ನಾವೇ ಉತ್ತಮ ಎಂದು ಬೆನ್ನು ತಟ್ಟಿಕೊಳ್ಳುತ್ತಾರೆ. ಆ ಪರಿಸ್ಥಿತಿ ಇದೆ, ಅದರಿಂದ ಹೇಳಿದೆ. ಮಾನ್ಯ ಸಚಿವರನ್ನು ಕೇಳಿಕೊಳ್ಳುವುದು ಎಂದರೆ, ಈ ರೇಟ್ ಏತಕ್ಕೋಸ್ಕರ ಜಾಸ್ತಿ ಆಯಿತು. ೪೭ ಲಕ್ಷ ರೂಪಾಯಿ ಬ್ರಿಡ್ಜ್, ವಗೈರೆ ಕಟ್ಟಿಸಿದ್ದನ್ನು ಏನು ಸೇರಿಸಿ ಹಾಕಿದ್ದಾರೆ, ಇದನ್ನು ಕಟ್ಟುವ ಅವಶ್ಯಕತೆ ಇಲ್ಲ. ಆದ್ದರಿಂದ ಅದನ್ನು ಕಳೆದು ಮನೆಗೆ ರೇಟನ್ನು ಕಡಿಮೆ ಮಾಡಬೇಕು. ಇದು ಎರಡನೆಯದು. ಮೂರನೆಯದಾಗಿ ಬಿಡಿ ಸೈಟ್‌ನ ಹರಾಜಿನಲ್ಲಿ ಬಂದಂಥ ಹಣದಲ್ಲಿ ಈ ಖರ್ಚನ್ನೆಲ್ಲಾ ಕಳೆದು, ಒರಿಜಿನಲ್ ರೇಟ್ ಎಷ್ಟಿತ್ತೋ ಅಷ್ಟಕ್ಕೆ ಈ ಮನೆಗಳನ್ನು ಕೊಡಬೇಕೆಂದು ಹಿಂದಿನ ಸರಕಾರದ ಮುಖ್ಯಮಂತ್ರಿಗಳು ಆರ್ಡರ್ ಕೊಟ್ಟಿರುವುದರಿಂದ, ಅದನ್ನೂ ಕೂಡಾ ಗಣನೆಗೆ ತೆಗೆದುಕೊಂಡು ಈ ಮನೆಗಳನ್ನು ನ್ಯಾಯವಾಗಿ ಕೊಡತಕ್ಕಂಥ ರೇಟಿಗೆ ಫಿಕ್ಸ್ ಮಾಡಬೇಕೆಂದು ಮಾನ್ಯ ಸಚಿವರನ್ನು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಸ್ವಾಮಿ, ಆ ಮನೆಗಳು. ಸೊಗಸಾದ ಮನೆಗಳು ನೋಡುವುದಕ್ಕೆ ಎರಡು ಕಣ್ಣು ಸಾಲುವುದಿಲ್ಲ ಆ ಎಂಜಿನಿಯರ್ಸ್ ಇದ್ದಾರಲ್ಲಾ, ಅವರಿಗೆ ಈ ದೇಶದಲ್ಲಿ ಯಾವ ಒಂದು ಅವಾರ್ಡ್ ಸಹ ಸಿಕ್ಕಿಲ್ಲ. ಅವರಿಗೆ ಅವಾರ್ಡ್ ಕೊಡಬೇಕೆಂದು ಈ ಸದನದ ಮುಖಾಂತರ ಕೇಳಿಕೊಳ್ಳುತ್ತೇನೆ. ಆ ಮನೆಗಳನ್ನು ಕಟ್ಟಿಸಿದ್ದಾರೆ. ಸಿಮೆಂಟ್‌ಗೆ ಮರಳನ್ನು ತೋರಿಸಿಬಿಟ್ಟಿದ್ದಾರೆ. ಅಗೋ ಮರಳೇ ಇಲ್ಲಿ ಸಿಮೆಂಟ್ ಇದೆ ಎಂದು ಹೇಳಿ, ಮಿಕ್ಸ್ ಮಾಡುವುದಕ್ಕೆ ಹೋಗುವುದಿಲ್ಲ, ಆ ತೊಂದರೆ ಅವರು ತೆಗೆದುಕೊಳ್ಳುವುದಿಲ್ಲ. ಅಂತಹ ದರಿದ್ರ ಹೊಲಸು ಕೆಲಸ ಮಾಡಿಟ್ಟಿದ್ದಾರೆ. ಇಷ್ಟೆಲ್ಲಾ ಇದ್ದರೂ, ಎಷ್ಟು ಜನ ಮಂತ್ರಿಗಳು ಇದ್ದರೂ. ಎಲ್ಲ ಇದ್ದರೂ, ಆ ಕ್ವಾಲಿಟಿ ಆಫ್ ವರ್ಕ್ಸ್ ನಿರಂತರವಾಗಿ ಹಾಗೇ ನಡೆದುಕೊಂಡು ಬರುತ್ತಿದೆ. ಒಬ್ಬ ಎಂಜಿನಿಯರ್ ಆಗಬೇಕಾದರೆ ಈ ದೇಶದ ದುಡ್ಡು ಖರ್ಚಾಗುತ್ತದೆ.

ಬಡರೈತರು, ಬಡಜನತೆ ಕೊಟ್ಟಂತಹ ಎಷ್ಟು ಲಕ್ಷ ರೂಪಾಯಿ ದಂಡ್ಡಿನಲ್ಲಿ ಒಬ್ಬ ಎಂಜಿನಿಯರ್ ಆಗುತ್ತಾನೆ. ಅವರು ಇಂತಹ ಒಂದು ಹೊಲಸು ಕೆಲಸ ಮಾಡಿದರೆ ಜನತೆಗೆ ದ್ರೋಹ ಮಾಡಿದರೆ, ಅವರನ್ನು ಎಂಜಿನಿಯರ್ಸ್ ಎಂದು ಕರೆಯುವುದಕ್ಕೆ ಆಗುತ್ತದೆಯೋ ಎಂದು ನನಗನ್ನಿಸುತ್ತದೆ. ಅವರು ಹಾಕಿರತಕ್ಕಂಥ ಸಿಮೆಂಟ್ ಗೋಡೆ ನೋಡಬೇಕು. ಸ್ವಾಮಿ ಕಟ್ಟಿದ ಆರೇ ತಿಂಗಳಲ್ಲಿ ಅದು ಕೆಳಕ್ಕೆ ಬೀಳುತ್ತದೆ. ಇಲ್ಲ ನೀರೆಲ್ಲಾ ಮೇಲೆ ಬಿದ್ದು ಅದು ಕೆಳಕ್ಕೆ ಉರುಳುತ್ತದೆ. ನಾವು ಬಡವರ ಹೆಸರು ಹೇಳಿ, ಬಡವರ ಓಟು ತೆಗೆದುಕೊಂಡು, ಬಡವರಿಗೋಸ್ಕರ ಕಣ್ಣೀರು ಹಾಕಿ, ಬಡವರ ಶೋಷಣೆ ಮಾಡಿ ಇಂತಹ ಕೆಲಸ ಮಾಡುತ್ತಿರುವ ಅಧಿಕಾರಿಗಳನ್ನು ನೋಡಿಯೂ ಸುಮ್ಮನೇ ಇರಬೇಕೆಂದು, ಇವರನ್ನು ನೋಡಿಕೊಳ್ಳುತ್ತಾ ಸುಮ್ಮನೆ ಕುಳಿತರೆ ನಮ್ಮನ್ನು ಯಾವ ದೇವರು ಕ್ಷಮಿಸುತ್ತಾನೆ.

ಶ್ರೀ ಸಿ. ಬೈರೇಗೌಡ.— ಎಂಜಿನಿಯರ್ಸ್ ಜೊತೆಗೆ ಕಂಟ್ರಾಕ್ಟರ್ಸ್ ಸೇರಿಲ್ಲವೇ ?

ಶ್ರೀ ಕೆ. ಹೆಚ್. ಹನುಮೇಗೌಡ.— ಕಂಟ್ರಾಕ್ಟರ್ಸ್ ಇದ್ದರು. ಆದರೆ ಉಳಿದವರು ಏನು ಮಾಡುತ್ತಿದ್ದರು. ಮಿನಿಸ್ಟರ್ ಇಲ್ಲವೇ, ಅಧಿಕಾರಿಗಳು ಇಲ್ಲವೇ ? ಈ ಹೌಸಿಂಗ್ ಬೋರ್ಡ್‌ಗೆ ಒಬ್ಬ ಕ್ವಾಲಿಟಿ ಕಂಟ್ರೋಲರ್‌ಅನ್ನು ಅಪಾಯಿಂಟ್ ಮಾಡಿ ಈ ತರಹ ಮನೆಗಳು ಆಗಿದ್ದರೆ ತನಿಖೆ ಮಾಡುವುದು ಬೇಡವೇ ? ಎರಡು ಮೂರು ವರ್ಷದ ಕೆಳಗೆ ಮಳೆ ಬಿದ್ದು ಮನೆಯ ಮೇಲ್ಛಾವಣಿ ಕೊಚ್ಚಿಕೊಂಡು ಹೋಯಿತು ಎಂದು ಕೇಳಿದ್ದೆ. ಪ್ರತಿಯೊಂದು ಮನೆಯೂ ಸೋರುತ್ತದೆ. ಎಲೆಕ್ಟ್ರಿಕಲ್ ಕಂಟ್ರಾಕ್ಟರ್ ಅಷ್ಟೇ. ಎರಡು ಮೂರು ವೈರ್ ಎಳೆದು ಎರಡು ಪ್ಲಗ್ ಹಾಕುತ್ತಾನೆ. ಕಣ್ಣು ಮುಚ್ಚಿಕೊಂಡು ಬಿಲ್ ಕೊಡುತ್ತಾರೆ. ಹೇಗೆ ಕೊಟ್ಟಿದ್ದಾರೆ. ಹೇಗೆ ಕೊಡುವುದಕ್ಕೆ ಸಾಧ್ಯ ? ಅವರು ಏನೋ ಕೊಟ್ಟುಬಿಟ್ಟು ಏನೋ ವ್ಯವಹಾರ ಮಾಡಿಕೊಂಡು ಬಿಡುತ್ತಾರೆ. ಇಷ್ಟೆಲ್ಲಾ ವ್ಯವಹಾರಗಳು ಆಗುತ್ತಿದ್ದರೂ ಅವರನ್ನು ಚೆಕ್ ಮಾಡುವವರು, ಕೇಳುವವರು, ಕಂಟ್ರೋಲ್ ಮಾಡುವವರು ಇಲ್ಲ ಎಂದು ಆದಮೇಲೆ ನನಗನ್ನಿಸುತ್ತದೆ, ಸರಕಾರ ಇದೆಯೋ ? ಅಧಿಕಾರಿಗಳು ಇದ್ದಾರೆಯೋ ? ಮಂತ್ರಿಗಳಿಗೂ ಇದು ಒಂದು ಸವಾಲು ಎಂಬ ಪ್ರಶ್ನೆಯನ್ನು ಹಾಕುವುದಕ್ಕೆ ನಾನು ಇಚ್ಛೆಪಡುತ್ತೇನೆ. ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ. ಯಾವ ಕೆಲಸ ಇಲ್ಲದೇ ಹೋದರೂ, ಎರಡು ಮೂರು ಕೆಲಸ ಕಡಿಮೆಯಾದರೂ ಪರವಾಗಿಲ್ಲ, ಅವರು ಹಾಸನದ ಹೌಸಿಂಗ್ ಬೋರ್ಡ್ ಮನೆಗಳನ್ನು ತಕ್ಷಣ ಬಂದು ನೋಡಬೇಕು. ಹಾಸನದಲ್ಲಿ ಈ ರೀತಿ ಆಗಿದೆ. ಬೇರೆ ಕಡೆ ನಾನು ನೋಡಿಲ್ಲ. ಎಲ್ಲಾ ಸೂಪರಿಂಟೆಂಡಿಂಗ್ ಎಂಜಿನಿಯರ್‌ಗಳು ಚೀಫ್ ಎಂಜಿನಿಯರ್‌ಗಳು ಅವರೇ, ಎಲ್ಲಾ ಇದೇ ಗತಿ. ಮಾನ್ಯ ಸಚಿವರು ತಕ್ಷಣ ಹೋಗಿ ನೋಡಿ ಸಂಬಂಧಪಟ್ಟ ನಾಲ್ಕು ಜನರನ್ನು ಸಸ್ಪೆಂಡ್ ಮಾಡಿ ಏನಾದರೂ ಆಕ್ಷನ್ ತೆಗೆದುಕೊಂಡು ಬೇರೆಯವರಿಗೆ ಮಾದರಿ ಆಗಬೇಕೆಂದು ನಾನು ವಿನಯದಿಂದ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಆಮೇಲೆ ಇವರ ಬಗ್ಗೆ ಲೋಕಾಯುಕ್ತಕ್ಕೆ ಹೇಳಿ ಎಂದು ಜನಗಳು ಅರ್ಜಿ ಬರೆದಿದ್ದಾರೆ.

* * * * *

MR. SPEAKER.— It is an aspersion on an institution. So, I don't want it to become the part of the proceedings.

ಶ್ರೀ ಕೆ. ಹೆಚ್. ಹನುಮೇಗೌಡ.— ಹಾಗಿದ್ದರೆ ನಾನು ಇದನ್ನು ಇಷ್ಟಕ್ಕೆ ನಿಲ್ಲಿಸುತ್ತೇನೆ.

೬-೪೫ ಪಿ. ಎಂ.

ಇಷ್ಟನ್ನು ಹೇಳುತ್ತಾ ಮಾನ್ಯ ಸಚಿವರು ತಕ್ಷಣದಿಂದ ಈ ಕೆಲಸಗಳನ್ನೆಲ್ಲ ಇನ್‌ಸ್ಪೆಕ್ಟ್ ಮಾಡಿ ವ್ಯವಸ್ಥಿತ ರೀತಿಯಲ್ಲಿ ಅದನ್ನು ಸೆಟ್‌ರೈಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ದುಬಾರಿಯನ್ನಾಗಿರುವ ರೇಟನ್ನು ಕಡಿಮೆ ಮಾಡಿ ನ್ಯಾಯವಾದ ಬೆಲೆಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನೊಂದು ವಿಚಾರ ಸ್ವಾಮಿ, ಹಿಂದೆ ಎರಡು ಮೂರು ಸಾರಿ ಒಟ್ಟಿಗೇ ದುಡ್ಡು ಕೊಟ್ಟರೆ ಬಡ್ಡಿಯನ್ನು ಪೀನಲ್ ಇಂಟರೆಸ್ಟನ್ನು ವೇವ್ ಮಾಡುತ್ತೇವೆಂದು ಸರ್ಕಾರ ಆರ್ಡರ್ ಮಾಡಿದ್ದು ನನಗೆ ಜ್ಞಾಪಕ ಇದೆ. ಈಗಲೂ ಕೂಡ ಮಾನ್ಯ ಸಚಿವರು ಅವಕಾಶ ಕೊಟ್ಟರೆ, ಕಂತು ಜಾಸ್ತಿ ಇರುವವರು ಕಂತು ಕಟ್ಟುತ್ತಾರೆ. ಇದರಿಂದ ಪೀನಲ್ ಇಂಟರೆಸ್ಟ್ ಕಡಿಮೆಯಾಗುತ್ತದೆ, ಆದ್ದರಿಂದ ಇದಕ್ಕೆ ಒಂದು ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

(***Expunged as ordered by the chair)

ಇನ್ನು ಟ್ರಸ್ಟ್ ಬೋರ್ಡ್‌ಗಳು ಎಂದು ಮಾಡಿದ್ದಾರೆ. ಹುಬ್ಬಳ್ಳಿ, ಧಾರವಾಡ, ಬೆಂಗಳೂರು ಮೈಸೂರು, ಇಲ್ಲೆಲ್ಲಾ ಒಳ್ಳೆಯ ಕೆಲಸಗಳು ಆಗಿವೆ. ಆದರೆ ನಮ್ಮ ಹಾಸನದಲ್ಲೂ ಇಂಥದನ್ನು ಮಾಡಿ ಏಳೆಂಟು ವರ್ಷವಾಯಿತು. ಆದರೆ ಒಂದೂ ಸೈಟ್ ಹಂಚಿರುವ ಜ್ಞಾಪಕ ನನಗಿಲ್ಲ. ಆದರೆ ಖರ್ಚು ಮಾತ್ರ ಯಥಾಪ್ರಕಾರ ಆಗಿದೆ. ಪ್ರೈವೇಟ್ ಲೇ ಔಟ್ ಮಂಜೂರು ಆದಾಗ ಅವರಿಂದ ಒಂದು ಲಕ್ಷ, ಎರಡು ಲಕ್ಷ ಅಂತ ಲಕ್ಷಗಟ್ಟಲೆ ಹಣ ಕಟ್ಟಿಸಿಕೊಳ್ಳುತ್ತಾರೆ. ಆದರೆ ಆ ಹಣವನ್ನು ಆ ಪ್ರೈವೇಟ್ ಲೇ ಔಟಿಗೆ ಖರ್ಚು ಮಾಡುವುದಿಲ್ಲ. ಆದ್ದರಿಂದ ತಾವು ಏನು ಆದೇಶ ಹೊರಡಿಸಬೇಕೆಂದರೆ, ಯಾವ ಪ್ರೈವೇಟ್ ಲೇ ಔಟ್‌ಗೆಂದು ದುಡ್ಡು ಕಟ್ಟಿಸಿಕೊಳ್ಳುತ್ತಾರೋ, ಅದಕ್ಕೇ ಆ ಹಣವನ್ನು ಖರ್ಚು ಮಾಡಬೇಕೆಂದು ತಾವು ಆದೇಶ ಹೊರಡಿಸಬೇಕು ಮತ್ತು ಇದನ್ನು ಕಡ್ಡಾಯವಾಗಿ ಪಾಲಿಸಬೇಕೆಂದು ಹೇಳುತ್ತೇನೆ. ಕೆಲವು ಟ್ರಸ್ಟ್ ಬೋರ್ಡ್‌ಗಳಿಗೆ ಹಣವೇ ಇಲ್ಲ. ಆದ್ದರಿಂದ ಸರ್ಕಾರ ಸೀಡ್ ಮನಿ ಯನ್ನಾದರೂ ಅವಕ್ಕೆ ಕೊಡುವ ವ್ಯವಸ್ಥೆ ಮಾಡಿ ಅವು ಯಶಸ್ವಿಯಾಗಿ ಕೆಲಸ ಮಾಡಲು ಕ್ರಮ ತೆಗೆದು ಕೊಳ್ಳಬೇಕೆಂದು ಹೇಳುತ್ತೇನೆ.

ಈ ಮುನಿಸಿಪಾಲಿಟಿಗಳ ವ್ಯಾಪ್ತಿಯಲ್ಲಿ ೨೦ ಸಾವಿರದೊಳಗೆ ಜನಸಂಖ್ಯೆ ಇದ್ದರೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಸರ್ಕಾರದವರು ಮುಫತ್ತಾಗಿ ಮಾಡುತ್ತಾರೆ. ಆದರೆ ಎಲ್ಲೆಲ್ಲಿ ೨೦ ಸಾವಿರ ಕ್ಕಿಂತ ಹೆಚ್ಚು ಜನಸಂಖ್ಯೆ ಇರುತ್ತದೋ ಅಂಥಾ ಪಟ್ಟಣಗಳಿಗೆ ನೀರು ಪೂರೈಸಲು ಆಗುವ ಪೂರ್ತಾ ಖರ್ಚಿನ ಹಣವನ್ನು ಬ್ಯಾಂಕ್‌ನಿಂದ, ಸರ್ಕಾರದಿಂದ, ಎಲ್‌ಐಸಿಯಿಂದ/ಹುಡ್ಕೋ ಸಂಸ್ಥೆಯಿಂದ ಸಾಲ ಪಡೆಯಬೇಕೆಂದು ಆದೇಶ ಇದೆ. ನಾನು ಮಂತ್ರಿಗಳನ್ನು ಈ ಬಗ್ಗೆ ಕೇಳುವುದೇನೆಂದರೆ ೨೦ ಸಾವಿರ ಜನಸಂಖ್ಯೆ ಎಂದು ಇರುವುದನ್ನು ೫೦ ಸಾವಿರಕ್ಕೆ ಹೆಚ್ಚಿಸಿ ಅಲ್ಲಿಯವರೆಗೆ ಸರ್ಕಾರವೇ ನೀರಿನ ಸರಬ ರಾಜನ್ನು ಮುಫತ್ತಾಗಿ ಒದಗಿಸಬೇಕು. ಒಂದು ವೇಳೆ ಸರ್ಕಾರದ ಹಣಕಾಸು ಪರಿಸ್ಥಿತಿ ಸರಿಯಿಲ್ಲ ದಿದ್ದರೆ ೫೦ ಪರ್ಸೆಂಟನ್ನು ಸರ್ಕಾರ ಕೊಡಲಿ ಇನ್ನುಳಿದ ೫೦ ಪರ್ಸೆಂಟ್ ಹಣವನ್ನು ಮುನಿಸಿಪಾಲಿಟಿ ಯವರು ಕೊಡಲಿ ಎಂಬ ಆದೇಶವನ್ನು ಹೊರಡಿಸಬೇಕೆಂದು ಕೇಳಿಕೊಳ್ಳುತ್ತೇನೆ

ಅರ್ಬನ್ ವಾಟರ್ ಸಪ್ಲೈ ಅಂಡ್ ಸಿವರೇಜ್ ಬೋರ್ಡ್ ಎಂದು ಇದೆ. ಅದಕ್ಕೆ ಚೇರ್ಮನ್ ಗಳನ್ನಾಗಿ ಸಾಮಾನ್ಯವಾಗಿ ಐಎಎಸ್ ಆಫೀಸರ್‌ಗಳನ್ನು ಹಾಕುತ್ತಾರೆ. ಅವರ ಬಗ್ಗೆ ನನಗೆ ಗೌರವ ಇದೆ. ಆದರೆ ಅವರನ್ನು ಈ ಫ್ಯಾಕ್ಟರಿಗಳಿಗೆ ಟೆಕ್ನಿಕಲ್ ಬೋರ್ಡುಗಳಿಗೆ ಹಾಕಿ ಅವರ ಮನಸನ್ನು ನೋಯಿಸಿ, ಕೋಟ್ಯಾಂತರ ರೂಪಾಯಿಗಳ ಲಾಸಾಗುತ್ತಿದೆ. ಪಬ್ಲಿಕ್ ಹೆಲ್ತ್ ಇಂಜಿನಿಯರಿಂಗ್‌ಗೂ ಐಎಎಸ್ ಆಫೀಸರ್‌ಗೂ ಏನು ಸ್ವಾಮಿ ಸಂಬಂಧ ? ಅವರಿಗೆ ಈ ಇಲಾಖೆಯ ಬಗ್ಗೆ ಏನು ಗೊತ್ತಿರುತ್ತದೆ. ಒಂದು ಸಂಸ್ಥೆಯಲ್ಲಿ ಒಬ್ಬ ಚೇರ್ಮನ್ನಾಗಿದ್ದರೆ ಆತ ನಾಲ್ಕಾರು ಸಲ ಇನ್‌ಸ್ಪೆಕ್ಟ್ ಮಾಡಬೇಕು. ಎಲ್ಲಿ ಏನಾಗಿದೆ ಎಂದು ಕೇಳಬೇಕು. ಆದರೆ ಆನಾಲೆಡ್ಜ್ ಇಲ್ಲದವರನ್ನು ತೆಗೆದುಕೊಂಡು ಹೋಗಿ ಹಾಕಿ, ಕೊನೆಗೆ ಕೆಲಸವೂ ಆಗಲಿಲ್ಲ, ಲಕ್ಷಾಂತರ ರೂಪಾಯಿ ಕೋಟ್ಯಾಂತರ ರೂಪಾಯಿ ಹಾಳಾಗಿ ಹೋಯಿತು ಎಂದು ಹೇಳುವ ಒಂದು ಪರಿಪಾಠ ಈ ದೇಶದಲ್ಲಿ ಬೆಳೆದುಕೊಂಡು ಬಂದಿದೆ. ಆದ್ದರಿಂದ ಐಎಎಸ್ ಆಫೀಸರ್‌ಗಳನ್ನು ಅಡ್ಮಿನಿಸ್ಟ್ರೇಟಿವ್ ಸೈಡ್‌ನಲ್ಲಿ ಹಾಕಬೇಕೇ ವಿನಹ ಟೆಕ್ನಿಕಲ್ ಜಾಗಗಳಿಗೆ ಈ ಫ್ಯಾಕ್ಟರಿ ಗಳಿಗೆ ಹಾಕುವುದನ್ನು ತಕ್ಷಣ ಬಿಡಬೇಕು. ಇದರಿಂದ ದೊಡ್ಡ ಅನಾಹುತವಾಗುತ್ತದೆಂದು ಈ ಸಂದರ್ಭ ದಲ್ಲಿ ಹೇಳುತ್ತೇನೆ. ಈ ಹಿನ್ನೆಲೆಯಲ್ಲಿ ಅರ್ಬನ್ ವಾಟರ್ ಸಪ್ಲೈ ಅಂಡ್ ಸಿವರೇಜ್ ಬೋರ್ಡಿಗೆ ಒಬ್ಬ ಟೆಕ್ನಿಕಲ್ ಆಫೀಸರ್ ಅನ್ನು ಚೇರ್ಮನ್ನಾಗಿ ಹಾಕಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟನ್ನು ಹೇಳಿ ತಮ್ಮಲ್ಲಿ ಕೈಮುಗಿದು ಕೇಳಿಕೊಳ್ಳುತ್ತೇನೆ, ಹೌಸಿಂಗ್ ಬೋರ್ಡಿಗೆ ಮಾನ್ಯ ಸಚಿವರು ಒಂದು ನೋಡಬೇಕು, ಒಂದು ವೇಳೆ ಯಾರನ್ನಾದರೂ ತಾವು ಕಳುಹಿಸಿದರೆ ಪ್ರಯೋಜನವಾಗುವುದಿಲ್ಲ, ಎಲ್ಲರೂ ಒಂದಾಗುತ್ತಾರೆ. ಅಲ್ಲಿ ಸುಣ್ಣಾಗೆ ಮಾಡಿಕೊಂಡು ಫಸ್ಟ್ ಕ್ಲಾಸ್ ಆಗಿದೆ ಎಂದು ಹೇಳಿ ಏನೋ ಮಾತನ್ನು ಆಡಿ ನಾನು ಹೇಳಿದ್ದು ಸರಿ ಇಲ್ಲ ಎಂದು ಹೇಳುತ್ತಾರೆ. ಆದ್ದರಿಂದ ಅಲ್ಲಿಗೆ ಮಾತ್ರ ಬೇರೆ ಯಾರನ್ನೂ ಕಳುಹಿಸದೆ ತಾವೇ ಬರಬೇಕು ಎಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ. ಮಾನ್ಯ ಸಚಿವರೇ ಬಂದು ಅಲ್ಲಿ ವೆರಿಫೈ ಮಾಡಿ ಅದನ್ನು ನೋಡಿ ಆಗಿರತಕ್ಕಂಥ ಅನ್ಯಾಯವನ್ನು ಸರಿಪಡಿಸಿಕೊಡುತ್ತಾರೆ ಎಂದು ಹೇಳಿ ಮಾನ್ಯ ಸಚಿವರನ್ನು ನಾನು ಹಾಸನ ಜನತೆಯ ಪರವಾಗಿ ಬಹಳ ವಿನಯದಿಂದ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇವೆ. ಅವರು ಮನಸ್ಸು ಮಾಡಿದರೆ ಮಾಡುತ್ತಾರೆ. ಏನಾದರೂ ಕೆಲಸಕಾರ್ಯಗಳನ್ನು ಹೇಳಿದರೆ ಮಾಡುತ್ತಾರೆ. ಬಡವರ ಬಗ್ಗೆ ಅವರಿಗೆ ಸ್ವಲ್ಪ ಕನಿಕರ ಉಂಟು. ಅವರು ಸ್ವಲ್ಪ ದಕ್ಷತೆ ಯಿಂದ ಪ್ರಾಮಾಣಿಕತೆಯಿಂದ ಕೆಲಸವನ್ನು ಮಾಡತಕ್ಕಂಥ ಪ್ರವೃತ್ತಿಯುಳ್ಳ ಸಚಿವರಾಗಿದ್ದಾರೆ. ಆದ್ದರಿಂದ ಅವರು ಬೇರೆ ಎಲ್ಲಾ ಕೆಲಸವನ್ನು ಮಾಡುವುದರ ಜೊತೆ ನಮ್ಮ ಕೆಲಸವನ್ನು ಸಹ ಮಾಡಿ ಪುಣ್ಯ ಕಟ್ಟಿಕೊಳ್ಳುತ್ತಾರೆ ಎಂದು ತಿಳಿದುಕೊಂಡು ಇಷ್ಟು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟ ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI NAZEER AHMED.—Mr. Speaker Sir...

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಾವು ಬೆಳಿಗ್ಗೆ ೧೧ ಗಂಟೆಗೆ ಬಂದಿದ್ದೇವೆ. ನಮಗೆ ಏನಾಗುತ್ತದೆ ಎಂದರೆ ನಾವು ಬೆಳಿಗ್ಗೆಯಿಂದ ಕುಳಿತುಕೊಂಡಿರುವವರು. ಮಧ್ಯದಲ್ಲಿ ಹೋಗಿ ಬರುವವರಿಗೆ ಆದರೆ ಪರವಾಗಿಲ್ಲ. ನಾವು ಎದ್ದು ಹೋಗಿಬಿಟ್ಟರೆ ಯಾರೂ ಇರುವುದಿಲ್ಲ. ದಯವಿಟ್ಟು ಕನ್‌ಸಿಡರ್ ಮಾಡಿ ನೋಡಿ. ೭ ಗಂಟೆಗೆ ಸಭೆಯನ್ನು ಮುಕ್ತಾಯ ಮಾಡುವುದು ಒಳ್ಳೆಯದು.

MR. SPEAKER.—We will adjourn at 7 P. M.

ಶ್ರೀ ವಾಟಾಳ್ ನಾಗರಾಜ್.—ಯಾರು ಜಾಸ್ತಿ ಹೊತ್ತು ಕುಳಿತಿರುತ್ತಾರೆ, ಅವರಿಗೆ ಜಾಸ್ತಿ ಅವಕಾಶ ಕೊಡಬೇಕು. ಯಾರು ಕುಳಿತುಕೊಳ್ಳುವುದಿಲ್ಲ ಅವರಿಗೆ ಖಂಡಿತಾ ಅವಕಾಶವನ್ನು ಕೊಡಬೇಡಿ. ಈ ರೀತಿ ಮಾಡಿದರೆ ಬಹಳ ಅನುಕೂಲವಾಗುತ್ತದೆ.

MR. SPEAKER.—Sri Nazeer Ahmed is making a maiden speech.

SRI NAZEER AHMED (Binnipet).—Mr. Speaker Sir, I welcome the demands presented by the Hon'ble Minister for Housing and Urban Development. Here, I would like to give suggestions to the Minister regarding the B.D.A., B.W.S.S.B. and the Bangalore City Corporation. Nearly 40% of the urban population of our State lives in Bangalore City. I would like to mention some points about the drainage in my Constituency. There is one nala called Vrishabhavathinala. This is a water drain which passes through one of the slums of my Constituency. It starts from Yashavanthpur and it covers Rajajinagar, Malleswaram and some parts of Gandhinagar and it passes through my Constituency. There is no retaining wall in that nala. Due to non-providing of retaining wall we have suffered very big casualities and sometimes we have lost large number of human lives. Many people have lost their shelter. During 1983 when Bangalore experienced heavy rains thousands of people have lost their houses and many people have lost their kith and kin. When we approach the Corporation to reddress our grievances, they say the Corporation has got a very big master plan to stop these problems recurring every year due to rains. They said, Kirloskar Company have come forward to implement it and it is going to cost Rs. 30 crores for the Corporation. But, the Corporation does not have money to implement it ; they have to borrow from other sources. I do welcome such plans. Bangalore City should have some concrete drainage system. There is no doubt about it. My request is priority should be given to people who are living below poverty line, backward classes, scheduled castes and scheduled tribes and minorities. They are all living in low lying areas in my Constituency. These are the places which are badly affected every year due to rains. It starts from Manjunathanagar, Kempapura Agrahar, Padarayanapur, and adjoining areas which are thickly populated and these areas are vulnerable when there are heavy rains. If there are heavy rains this year the problem will also repeat and there will be heavy loss of life and properties. I have made several requests to the Corporation authorities to take up the nala work on priority basis so that we can come to their recue at the time of rains.

Sir, during the year 1976-77 about 2000 siteless people were given sites at the rate of Rs. 25/- per site. All these people are living happily because they have got shelter for dwelling. There are grateful to the Government for the same. Some of them have not paid Rs. 25/- at that time. They have been left out due to some technical reasons. Today when these people approached the authorities, they have fixed the rate as Rs. 100/- for one yard. I would like to ask the Minister as to why there should be such a discrimination and disparity? For the same site some people have paid Rs. 25/- and others are required to pay Rs. 100/- per yard. This is not their fault and this has happened due to some technical fault of the officers. I request that the same parameter be adopted to these persons also.

Now, I come to BWSSB. Sir, there is lot of disparity particularly in the distribution of water in Bangalore. In some areas where affluent class of people live i.e., areas such as Jayanagar, Malleswaram, Rajajinagar, Sadashivanagar etc., where the BDA has formed layouts there is uninterrupted supply of water. They get water for minimum 5 to 6 hours in a day. Residents of these areas stock water in tanks and they do not face any type of problems so far as water is concerned. Whereas people living in these revenue areas they get water only for 2 hours in a day. Sometimes they get water only during midnight. In some areas water comes between 12 midnight to 4 A.M in the morning. These areas are inhabited by people who go for construction work or some works which are corried out by poor people. Most of them are beedi workers, construction workers, poor people, backward class people and minorities. Their livelihood depends on their day to day work. They have to wake up in the early morning for water and they have to go for work after 8 A.M. Their condition has become precarious, particularly of people who are living below the poverty line and those who are downtrodden. I request the Hon'ble Minister that affluent classes can afford to stock water and as such you can release water to their areas during night hours and direct the concerned to release water atleast during the day time to my Constituency particularly in slums like Shamanna garden, Goripaya, Padarayanapura etc., If the water is supplied during day time they will not have diff culty to go to their day to day work. Atleast there should be an uninterrupted water supply during day time for 2-3 hours in such areas. These revenue pockets have experienced a growth in a haphazard manner there are ups and downs and as a result of which they donot get even supply of water. Therefore I request the authorities to construct overhead tanks so that there will be uninterrupted water supply and they are rest assured of water supply.

Sir, the Corporation has fixed the betterment charges earlier at the rate of Rs. 8 per square foot. During 1983 the new Government

came and they have increased this to Rs. 38 and in some areas it is Rs. 46/-. Half of the residents have paid these charges. Today also people are remitting betterment charges to the Corporation. They have not made it clear as to how much betterment charges have to be paid. Inspite of their paying betterment charges the Corporation is not providing civic amenities in these areas. When we approach the Corporation they say we are not getting betterment charges from that area. When half of the people have paid betterment charges and rest of the people are in the process of paying betterment charges why should the Corporation deny them these civic amenities ? I request the Hon'ble Minister to order for an enquiry into this matter and direct the concerned to provide civic amenities in these areas, It is not only there in Kasturba Nagar but also in other areas such as shamanna Nagar and other adjoining areas. Last week when we had rains I took the Commissioner for City Corporation to my area and I showed him how the water had entered into the low lying areas, People cannot sleep in their houses ; they cannot take shelter in their houses. They have to go to community halls or schools. My contention is, Bangalore has been called as the air conditioned city of India and Green City in India, they have a good vision about Bangalore when some people see from outside Bangalore. But, if one comes to my Constituency, certainly this opinion will be changed. There is one area called Mominpura in my Constituency where people are living in 5'×8' houses and that too 10-15 people are living in one house, There is 3 feet road. The moment they come out of their houses they will see the doors of their front houses immediately and they feel they are entering into the other house which is situated in front of them. When His Excellency the Governor had addressed this August House recently there was a sentence in his address that the Government is going to provide housing facilities to poor and downtrodden people in the State. I had a discussion with the officers with a view to give housing facilities to people of my area. If there are co-operative societies in my area we can provide housing facilities to all of them and rehabitate them to better housing complexes. Bangalore being one of the important cities in the State housing facilities have become one of the foremost requirements of the day. Without a house, it is difficult for anybody to dwell. People are today sleeping on footpath, and bus-stands. I request the Hon'ble Minister to take note of these things and we have to take some measures immediately to give shelter to these people. Recently we celebrated Centenary programme of Dr. Babasaheb Ambedker. I am proud to say that half of my Constituency is inhabited by SCs/STs. In the morning Sri Dharma Singh, the Hon'ble member was telling that these local bodies are not spending 18% of their budget for the welfare of SCs/STs. I support this statement of the Hon'ble Member because it is

a correct statement. The Bangalore City Corporation has not spent 18% of the budgetary grants for these people. When I asked the officers of the Corporation to construct toilets and other sanit ry facilities in my Constituency for the use of SCs/STs out of this 18% grants, the officers were reluctant and they were histant I request the Government on this occasion that there should be some kind accountability and responsibility of the officers concerned. Even in the case of silting of drains, no Inspector or no worker will visit the areas earmarked for them for months together. We have to go on padayatra and we have take these officers there and make them to work. There will be 7–8 workers under one Inspector. These Inspectors will never visit and clean sanitary lines. There should be some kind of accountability and responsibility of these officers so that every month they should give progress report to h gher officers. They should inform them as to how much progress they have achieved in a month in their jobs. They should give a report about so many sanitary lines, so many nalas and other works they had taken up in every month. This method will h-lp us to keep nalas clean. Sir, I hav- taken much of the time of the House and I thank you very much for having given me this opportunity to speak. Thank you.

MR. SPEAKER.—Now the House stands adjourned to meet at 11 A.M. tomorrow.

(The House adjourned at Five minutes pastSeven of the Clock to meet again at Eleven of the Clock on Wednesday, the 13th of June 1990).